# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಶನಿವಾರ, ಫೆಬ್ರವರಿ 26, 2022

ಸಂಪುಟ : 48 ಸಂಚಿಕೆ : 287 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 4.00 www.janathavani.com janathavani@mac.com


## ಕೊಟ್ಟೂರು ದೊರೆಯೇ ನಿನಗಾರು ಸರಿಯೇ ..



ಕೊಟ್ಟೂರು (ವಿಜಯನಗರ ಜಿಲ್ಲೆ) ಪಟ್ಟಣದ ಆರಾಧ್ಯದೈವ ಕೊಟ್ಟೂರೇಶ್ವರ ಸ್ವಾಮಿಯ ರಥೋತ್ಸವವು ಶುಕ್ರವಾರ ಸಂಜೆ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ಸಂಭ್ರಮದಿಂದ ನೆರವೇರಿತು. ಶುಕ್ರವಾರ ಬೆಳಗಿನ ಜಾವ ದೇವಸ್ಥಾನದಲ್ಲಿ ಪೂಜಾ ಕೈಂಕರ್ಯಗಳು ಜರುಗಿದವು. ಸಂಜೆ ಸ್ವಾಮಿಯನ್ನು ದೇವಸ್ಥಾನದಿಂದ ರಥದವರೆಗೆ ಸಕಲ ವಾದ್ಯ ಮೇಳಗಳೊಂದಿಗೆ ಮೆರವಣಿಗೆಯಲ್ಲಿ ಕೊಂಡೊಯ್ದು ರಥಕ್ಕೆ ಪ್ರದಕ್ಷಿಣೆ ಹಾಕಿ ಪ್ರತಿಷ್ಠಾಪಿಸಲಾಯಿತು. ಬಳಿಕ ಭಕ್ತರು ತೇರು ಎಳೆದರು.

# ಕೃಷಿ ಪಂಪ್‌ಸೆಟ್‌ಗೆ ಹಗಲಿನಲ್ಲಿ ನಿರಂತರ 7 ಗಂಟೆ ವಿದ್ಯುತ್

### ರೈತರಿಗೆ ನೆರವಾಗಲು ತ್ರಿಫೇಸ್ ವಿದ್ಯುತ್ ಪೂರೈಕೆಗೆ ರಾಜ್ಯ ಸರ್ಕಾರದ ನಿರ್ಧಾರ

ಬೆಂಗಳೂರು, ಫೆ. 25 - ರೈತರಿಗೆ ಬಂಪರ್ ಸುದ್ದಿ ನೀಡಿರುವ ರಾಜ್ಯ ಸರ್ಕಾರ ಕೃಷಿ ಪಂಪ್‌ಸೆಟ್‌ಗಳಿಗೆ ಹಗಲು ವೇಳೆಯಲ್ಲಿ ನಿರಂತರವಾಗಿ ಏಳು ಗಂಟೆಗಳ ಕಾಲ ಮೂರು ಫೇಸ್ ವಿದ್ಯುತ್ ಪೂರೈಕೆ ಮಾಡುವುದಾಗಿ ಘೋಷಿಸಿದೆ.

ಸುದ್ದಿಗಾರರಿಗೆ ಈ ವಿಷಯ ತಿಳಿಸಿದ ಕನ್ನಡ ಮತ್ತು ಸಂಸ್ಕೃತಿ ಮತ್ತು ಇಂಧನ ಖಾತೆ ಸಚಿವ ವಿ.ಸುನೀಲ್ ಕುಮಾರ್, ಬೇಸಿಗೆಯಲ್ಲೇ ನಿರಂತರವಾಗಿ ತ್ರೀ ಫೇಸ್ ವಿದ್ಯುತ್ ಕಲ್ಪಿಸುವುದಾಗಿ ತಿಳಿಸಿದರು.

ರಾಜ್ಯದಲ್ಲಿ ಬೇಡಿಕೆಗಿಂತ ಉತ್ಪಾದನೆ ಹೆಚ್ಚಿದೆ, ಇಂತಹ ಸಂದರ್ಭದಲ್ಲಿ ಯಾವ ವರ್ಗಕ್ಕೂ ವಿದ್ಯುತ್ ಕೊರತೆಯಾಗಬಾರದು ಎಂದವರು ಹೇಳಿದ್ದಾರೆ.

ಕೋವಿಡ್‌ನಿಂದ ರೈತರು ಕಂಗಾಲಾಗಿದ್ದಾರೆ, ಈ ಸಂದರ್ಭದಲ್ಲಿ ಅವರಿಗೆ ಎಲ್ಲಾ ಹಂತಗಳಲ್ಲೂ ನೆರವು ನೀಡಬೇಕಾದ್ದು ಸರ್ಕಾರದ ಆದ್ಯ ಕರ್ತವ್ಯ ಎಂದರು.

ಬೇಸಿಗೆ ಸಂದರ್ಭದಲ್ಲಿ ವಿದ್ಯುತ್ ಕೊರತೆಯಿಂದ ಕೃಷಿ ಪಂಪ್‌ಸೆಟ್‌ಗಳಿಗೆ ಸಮರ್ಪಕವಾಗಿ ವಿದ್ಯುತ್ ಪೂರೈಕೆ ಆಗುವುದಿಲ್ಲ. ಆದರೆ, ಈ ಬೇಸಿಗೆಯಲ್ಲಿ ನಾವು ಹಗಲು ವೇಳೆಯಲ್ಲೇ ನಿರಂತರ ವಿದ್ಯುತ್ ನೀಡುತ್ತೇವೆ.

ಕೃಷಿ ಪಂಪ್ ಸೆಟ್‌ಗಳಿಗೆ ಮತ್ತು ಗೃಹ ಬಳಕೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾದರೆ ವಲಯ (2ನೇ ಪುಟಕ್ಕೆ)

# ಜಯಮ್ಮ ಗೋಪಿನಾಯ್ಕ ಪಾಲಿಕೆ ನೂತನ ಮೇಯರ್

## ಉಪ ಮೇಯರ್ ಆಗಿ ಗಾಯತ್ರಿಬಾಯಿ ಖಂಡೋಜಿರಾವ್, ಮೂರನೇ ಬಾರಿಯೂ ಬಿಜೆಪಿಗೆ ಗೆಲವು

ದಾವಣಗೆರೆ, ಫೆ.25- ಮಹಾನಗರ ಪಾಲಿಕೆ ನೂತನ ಮೇಯರ್ ಆಗಿ ಬಿಜೆಪಿಯ ಜಯಮ್ಮ ಗೋಪಿನಾಯ್ಕ ಹಾಗೂ ಉಪ ಮೇಯರ್ ಆಗಿ ಗಾಯತ್ರಿಬಾಯಿ ಖಂಡೋಜಿರಾವ್ ಆಯ್ಕೆಯಾಗಿದ್ದಾರೆ.

ಜಯಮ್ಮ ಅವರು 30ನೇ ವಾರ್ಡ್‌ನಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಜಯ ಸಾಧಿಸಿ, ಬಿಜೆಪಿಗೆ ಸೇರ್ಪಡೆಗೊಂಡಿದ್ದರು. 8ನೇ ವಾರ್ಡ್‌ನ ಗಾಯತ್ರಿ ಬಾಯಿ ಖಂಡೋಜಿರಾವ್ ಮೊದಲ ಬಾರಿಗೆ ಉಪ ಮೇಯರ್ ಪಟ್ಟ ಗಿಟ್ಟಿಸಿಕೊಂಡಿದ್ದಾರೆ.



ಪರಿಶಿಷ್ಟ ಜಾತಿ (ಮಹಿಳೆ)ಗೆ ಮೀಸಲಾಗಿದ್ದ ಮೇಯರ್ ಸ್ಥಾನಕ್ಕೆ ಬಿಜೆಪಿಯಿಂದ ಜಯಮ್ಮ ಗೋಪಿನಾಯ್ಕ ಹಾಗೂ ಕಾಂಗ್ರೆಸ್‌ನಿಂದ ನಾಗರತ್ನಮ್ಮ ನಾಮಪತ್ರ ಸಲ್ಲಿಸಿದ್ದರೆ, ಸಾಮಾನ್ಯ ಮಹಿಳೆಗೆ ಮೀಸಲಾಗಿದ್ದ ಉಪ ಮೇಯರ್ ಸ್ಥಾನಕ್ಕೆ ಬಿಜೆಪಿಯ ಗಾಯತ್ರಿಬಾಯಿ ಖಂಡೋಜಿರಾವ್, ಕಾಂಗ್ರೆಸ್‌ನ ಶ್ವೇತಾ ಶ್ರೀನಿವಾಸ್ ಉಮೇದುವಾರಿಕೆ ಸಲ್ಲಿಸಿದ್ದರು.

ಮೇಯರ್ ಹಾಗೂ ಉಪ ಮೇಯರ್ ಸ್ಥಾನಕ್ಕೆ ಸ್ಪರ್ಧಿಸಿದ್ದ ಬಿಜೆಪಿ ಅಭ್ಯರ್ಥಿಗಳು ತಲಾ 29 ಮತಗಳನ್ನು ಪಡೆದರೆ ಕಾಂಗ್ರೆಸ್ ಅಭ್ಯರ್ಥಿಗಳು ತಲಾ 25 ಮತಗಳನ್ನು ಪಡೆದರು.

ಒಟ್ಟು 45 ಸದಸ್ಯ ಬಲದ ಪಾಲಿಕೆಯಲ್ಲಿ ಬಿಜೆಪಿಯ 18 ಸದಸ್ಯರು, ಓರ್ವ ಸಂಸದ, ಓರ್ವ ಶಾಸಕ, ಐದು ಜನ ಎಂಎಲ್‌ಸಿ, ನಾಲ್ಕು ಪಕ್ಷೇತರರು ಸೇರಿ ಒಟ್ಟು 29 ಜನ ಮತದಾನ ಮಾಡಿದರು.

ಕಾಂಗ್ರೆಸ್ 21 ಸದಸ್ಯರು, ಓರ್ವ ಶಾಸಕ, ಇಬ್ಬರು ಎಂಎಲ್‌ಸಿ ಹಾಗೂ ಓರ್ವ ಪಕ್ಷೇತರ ಸೇರಿ ಒಟ್ಟು 25 ಜನ ಮತದಾನ ಮಾಡಿದರು. ಜೆಡಿಎಸ್ ಸದಸ್ಯೆ ಗೈರು ಹಾಜರಾಗಿದ್ದರು.

ವಿಧಾನ ಪರಿಷತ್ ಸದಸ್ಯರಾದ ಎನ್. ರವಿಕುಮಾರ್, ಡಾ. ತೇಜಸ್ವಿನಿ ರಮೇಶ್, ಆರ್. ಶಂಕರ್, ಕೆ.ಪಿ. ನಂಜುಂಡಿ (2ನೇ ಪುಟಕ್ಕೆ)

ಚುನಾವಣೆಯಲ್ಲಿ ಬಿಜೆಪಿ ಗೆದ್ದು ಮೇಯರ್- ಉಪಮೇಯರ್ ಸ್ಥಾನ ಪಡೆದಿದೆ. ಐದು ವರ್ಷದಲ್ಲಿ ಮೂರು ಬಾರಿ ಅಧಿಕಾರ ಹಿಡಿದ್ದೇವೆ. ಮುಂದಿನ 5 ವರ್ಷಗಳಲ್ಲಿ ನಮ್ಮದೇ ಅಧಿಕಾರವಿರಲಿದೆ.

- ಜಿ.ಎಂ. ಸಿದ್ದೇಶ್ವರ,

ಬಿಜೆಪಿಯವರು ಮೋಸದಿಂದ ಅಧಿಕಾರ ಹಿಡಿದಿದ್ದಾರೆ.

- ಶಾಮನೂರು ಶಿವಶಂಕರಪ್ಪ,


Apollo HOSPITALS

ಅಪೋಲೊ ಹಾಸ್ಪಿಟಲ್ಸ್ ವೈದ್ಯರು ದಾವಣಗೆರೆಯಲ್ಲಿ ಲಭ್ಯರಿರುತ್ತಾರೆ

ಕ್ಯಾನ್ಸರ್ ಅನ್ನು ಆರಂಭದಲ್ಲೇ ಪತ್ತೆ ಮಾಡಿದಲ್ಲಿ ಗುಣಪಡಿಸಬಹುದಾಗಿದೆ.
ಬೆಂಗಳೂರಿನ ಅಪೋಲೋ ಆಸ್ಪತ್ರೆಯಲ್ಲಿ ಕ್ಯಾನ್ಸರಿಗೆ ಅತ್ಯುತ್ತಮ ಚಿಕಿತ್ಸೆ ದೊರೆಯುತ್ತದೆ

ಡಾ|| ಸಿ. ಎನ್. ಪಾಟೀಲ್
MD (General Medicine), DM (Medical Oncology)
ಹಿರಿಯ ಕ್ಯಾನ್ಸರ್ ತಜ್ಞರು, ಅಪೋಲೊ ಹಾಸ್ಪಿಟಲ್ಸ್, ಬೆಂಗಳೂರು

▪ ಕ್ಯಾನ್ಸರ್ ಹೊಂದಿರುವ ಅಥವಾ ಕ್ಯಾನ್ಸರ್‌ಗೆ ಚಿಕಿತ್ಸೆ ಪಡೆಯುತ್ತಿರುವವರು ▪ ಸ್ತನಗಳಲ್ಲಿ ಗಂಟು ಹೊಂದಿರುವ ಮಹಿಳೆಯರು ▪ ನುಂಗಲು ಕಷ್ಟವಾಗುತ್ತಿರುವುದು ▪ ಕಫ ಮತ್ತು ಎಂಜಲಲ್ಲಿ ರಕ್ತವಿರುವುದು ▪ ವಾಸಿಯಾಗದ ಅಲ್ಸರ್ ▪ ವಿಲಕ್ಷಣ ಜ್ವರ ಹಾಗೂ ದೇಹದ ತೂಕ ನಷ್ಟವಾಗುತ್ತಿದ್ದಲ್ಲಿ ಸಲಹೆ ಪಡೆಯಿರಿ.

ಭಾನುವಾರ, 27ನೇ ಫೆಬ್ರವರಿ 2022 | ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 1.00 ಗಂಟೆವರೆಗೆ

ಸ್ಪಂದನ ಯೂರಾಲಜಿ ಸೆಂಟರ್
ಐಸಿರಿ, 8ನೇ ಮೇಯಿನ್, ಕೃಷ್ಣ ಬೇಕರಿ ಹತ್ತಿರ, ಅರುಣ ಟಾಕೀಸ್ ರಸ್ತೆ, ದಾವಣಗೆರೆ – 577002

08192-233023 / 96864 44448



|| ಶ್ರೀ ಆಂಜನೇಯ ಸ್ವಾಮಿ ಪ್ರಸನ್ನ || ಶಿವ | | ಶ್ರೀ ವೀರಭದ್ರೇಶ್ವರ ಸ್ವಾಮಿ ಪ್ರಸನ್ನ ||

ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ



ದಾವಣಗೆರೆ ಜಿ||, ತಾ||, ಶಿರಮಗೊಂಡನಹಳ್ಳಿ ಗ್ರಾಮದ ವಾಸಿ
ಶ್ರೀ ದೊಡ್ಡಹಾಲಪ್ಪ ಡಿ.ಎಂ. ವೀರೇಂದ್ರ ಪಾಟೀಲ್‌ರವರು ಮತ್ತು ಮಕ್ಕಳು
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ: 22.02.2022ರ ಮಂಗಳವಾರ ಮಧ್ಯಾಹ್ನ 1.30ಕ್ಕೆ ನಮ್ಮ ಪೂಜ್ಯ ಮಾತೃಶ್ರೀಯವರಾದ
ಶ್ರೀಮತಿ ದೊಡ್ಡಹಾಲಪ್ಪ ಮೀನಾಕ್ಷಮ್ಮನವರು
(ದಿ|| ಶ್ರೀ ದೊಡ್ಡಹಾಲಪ್ಪ ಮಹೇಶ್ವರಪ್ಪ ಧರ್ಮಪತ್ನಿ)
ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
ಕೈಲಾಸ ಶಿವಗಣಾರಾಧನೆಯನ್ನು
ದಿನಾಂಕ 26.02.2022ನೇ ಶನಿವಾರ ಬೆಳಿಗ್ಗೆ 11 ಗಂಟೆಗೆ ಶಿರಮಗೊಂಡನಹಳ್ಳಿ ಗ್ರಾಮದ ಮೃತರ ಸ್ವಗೃಹದಲ್ಲಿ
ನೆರವೇರಿಸಲು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ ಲಿಂಗೈಕ್ಯರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು
ಶ್ರೀಮತಿ ರತ್ನಮ್ಮ ಮತ್ತು ಶ್ರೀ ಎಸ್.ಎ. ರವೀಂದ್ರನಾಥ್,
ಶಾಸಕರು ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರ ಮತ್ತು ಸಹೋದರರು
ಶ್ರೀಮತಿ ಸುಧಾ ವೀರೇಂದ್ರ ಪಾಟೀಲ್, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯರು
ಡಿ.ಎಂ. ವೀರೇಂದ್ರ ಪಾಟೀಲ್ ಮತ್ತು ಮಕ್ಕಳು, ಮೊಮ್ಮಕ್ಕಳು
ಹಾಗೂ ಅಜ್ಜಪ್ಪ ವಂಶಸ್ಥರು, ದೊಡ್ಡಹಾಲಪ್ಪ ವಂಶಸ್ಥರು ಶಿರಮಗೊಂಡನಹಳ್ಳಿ

ಇಂದ: ಡಿ.ಎಂ. ವೀರೇಂದ್ರ ಪಾಟೀಲ್ ಮತ್ತು ಮಕ್ಕಳು,
ಶಿರಮಗೊಂಡನಹಳ್ಳಿ ದಾವಣಗೆರೆ ತಾ||, ಜಿ|| ಮೊ: 94496 49650, 97319 68465



Chennai Kumaran Exhibition and Sale in Davangere

1955
KUMARAN SILK
TRADERS
JAYA NAGAR, BENGALURU

VARAM
BOUTIQUE JEWELS
92.5 SILVER JEWELLERY

LOCATION
Southern Star Hotel, Davangere

DATE
25th, 26th, 27th Feb. 2022
10.00 am to 9.00 pm

Kanchipuram Silk Sarees in Lowest Price



EXCLUSIVE DISCOUNT 5 to 10%

New No. 15, Old No. 653, 11th C Main Road, 5th Block, JayaNagar, Bengaluru-560041
Phone : 080-26631300, Cell - 88677 92923

# ದೂರದೃಷ್ಟಿ, ಸಮಗ್ರತೆಯ ನೋಟದ ಕೊರತೆಯಿಂದ ಸಾಕಷ್ಟು ಸಮಸ್ಯೆ ಎದುರಿಸುತ್ತಿದ್ದೇವೆ

ಮಲೇಬೆನ್ನೂರು, ಫೆ.25- ಜನರ ಮನಸ್ಸುಗಳು ಮೊದಲಿನಂತಿಲ್ಲ. ದೂರದೃಷ್ಟಿ, ಸಮಗ್ರತೆಯ ನೋಟದ ಕೊರತೆಯಿಂದಾಗಿ ಪ್ರಸ್ತುತ ನಾವು ಬಹಳ ಸಮಸ್ಯೆ ಎದುರಿಸುತ್ತಿದ್ದೇವೆ ಎಂದು ಬಾಳೆಹೊನ್ನೂರು ರಂಭಾಪುರಿ ಪೀಠದ ಜಗದ್ಗುರು ಡಾ. ಶ್ರೀ ವೀರಸೋಮೇಶ್ವರ ರಾಜದೇಶೀಕೇಂದ್ರ ಶಿವಾಚಾರ್ಯ ಸ್ವಾಮೀಜಿ ಬೇಸರ ವ್ಯಕ್ತಪಡಿಸಿದರು.

ಕುಣೆಬೆಳಕೆರೆ ಗ್ರಾಮದಲ್ಲಿ ಇಂದು ಶ್ರೀ ವೀರಾಂಜನೇಯ ಸ್ವಾಮಿ ದೇವಸ್ಥಾನದ ಮಹಾದ್ವಾರ ಉದ್ಘಾಟನೆ ಮತ್ತು ಗೋಪುರದ ಕಳಸಾರೋಹಣ ನೆರವೇರಿಸಿ, ನಂತರ ಗ್ರಾಮಸ್ಥರು ಹಮ್ಮಿಕೊಂಡಿದ್ದ ಜನ ಜಾಗೃತಿ ಧಾರ್ಮಿಕ ಸಮಾರಂಭದ ದಿವ್ಯ ನೇತೃತ್ವ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.


ಇತ್ತೀಚಿನ ದಿನಗಳಲ್ಲಿ ರಾಜಕೀಯ ರಂಗದ ಜೊತೆಗೆ ಧಾರ್ಮಿಕ ರಂಗವೂ ಕುಲಷಿತಗೊಂಡಿದೆ ಎಂದರೆ ತಪ್ಪಾಗಲಾರದು.

ಯಾವುದೇ ಸಂಘರ್ಷ ಹುಟ್ಟುಹಾಕುವುದು ಧರ್ಮದ ಕೆಲಸವಲ್ಲ. ಜಾತಿಗಳನ್ನು ಬೆಳೆಸುವುದಕ್ಕಿಂತ ಧರ್ಮದ ಸಾತ್ವಿಕತೆ ಬೆಳೆಸಿದರೆ ನಾವೆಲ್ಲರೂ ಸೇರಿ ಉತ್ತಮ ಸಮಾಜ ಕಟ್ಟುವುದಕ್ಕೆ ಸಾಧ್ಯವಾಗುತ್ತದೆ ಎಂದು ಸ್ವಾಮೀಜಿ ಹೇಳಿದರು.

ಬಸವಣ್ಣ ಸೇರಿದಂತೆ ಎಲ್ಲಾ ಧರ್ಮಗಳ ಪಿತಾಮಹರು ಮಾನವ ಧರ್ಮಕ್ಕೆ ಲೇಸನ್ನೇ ಬಯಸಿದ್ದಾರೆ. ಆದರೆ, ಇತ್ತೀಚೆಗೆ ಅತಿಯಾದ ವೈಚಾರಿಕತೆ ಮತ್ತು ಅತಿಯಾದ ಬುದ್ದಿವಂತಿಕೆಯಿಂದಾಗಿ ದೇಶದಲ್ಲಿ ಅಶಾಂತಿ ವಾತಾವರಣ ನಿರ್ಮಾಣವಾಗಿದೆ. ಬಹಳ ಓದಿದವರಿಂದ ದೇಶಕ್ಕೆ ಒಳ್ಳೆಯದಾಗುತ್ತದೆ ಎಂದು ನಾವು ಭಾವಿಸಿದ್ದೇವೆ. ಆದರೆ, ಕೆಲವು ಬುದ್ದಿವಂತರು ಕಲುಷಿತ ವಾತಾವರಣ ಸೃಷ್ಟಿ ಮಾಡುತ್ತಿದ್ದಾರೆಂದು ಸ್ವಾಮೀಜಿ ಕಳವಳ ವ್ಯಕ್ತಪಡಿಸಿದರು.

ರಂಭಾಪುರಿ ಪೀಠದ ಧರ್ಮ ಪರಂಪರೆಯಲ್ಲಿ ಹಾಲುಮತ ಸಮಾಜಕ್ಕೆ ವಿಶೇಷ ಸಂಬಂಧವಿದೆ. ಇಂತಹ ಸಂಬಂಧಕ್ಕೆ ಕೆಲವರು ಕಲ್ಲು ಹಾಕುವ ಕೆಲಸ ಮಾಡಿದರು. ಆದರೂ ಹಾಲುಮತ ಸಮಾಜದ ಭಕ್ತರು ಮಾತ್ರ ರೇವಣ ಸಿದ್ದೇಶ್ವರರ ಕಾಲದಿಂದಲೂ ನಮ್ಮೊಂದಿಗೆ ಅವಿನಾಭಾವ ಸಂಬಂಧ ಮುಂದುವರೆಸಿಕೊಂಡು ಹೋಗುತ್ತಿರುವುದು ನಮಗೆ ಅತೀವ ಸಂತಸ ತಂದಿದೆ.

ಹಾಲುಮತ ಸಮಾಜದವರು ನಮ್ಮ ಉತ್ಸವಗಳಲ್ಲಿ ಡೊಳ್ಳು ಭಾರಿಸಿದರೆ ರಂಭಾಪುರಿ ಪೀಠಕ್ಕೆ ಮಳೆ ಬಂದಂತೆ ಎಂದು ಸ್ವಾಮೀಜಿ ಬಣ್ಣಿಸಿದರು.



**ಕುಣೆಬೆಳಕೆರೆ ದೇವಸ್ಥಾನದ ಕಾರ್ಯಕ್ರಮದಲ್ಲಿ ರಂಭಾಪುರಿ ಜಗದ್ಗುರುಗಳ ಬೇಸರ**

ಹೊನ್ನಾಳಿ ಹಿರೇಕಲ್ಮಠದ ಶ್ರೀ ಒಡೆಯರ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ ಆಶೀರ್ವಚನ ನೀಡಿ, ಧರ್ಮದ ಹಾದಿಯಲ್ಲಿ ನಮ್ಮ ಬದುಕು ಕಟ್ಟಿಕೊಂಡರೆ ನಿತ್ಯವು ಇದೇ ರೀತಿ ಸಂತೋಷ, ನೆಮ್ಮದಿಯಿಂದ ಇರಬಹುದು. ಶ್ರೀಮಂತಿಕೆ, ಸಂಪತ್ತಿನಿಂದ ಸಮಾಧಾನ, ಸಂತೋಷ ಸಿಗುವುದಿಲ್ಲ ಎಂದರು.

ಆವರಗೊಳ್ಳದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಆಶೀರ್ವಚನ ನೀಡಿ, ಮನಸ್ಸುಗಳು ಕೊಳೆಯಾದಾಗ ತೊಳೆದುಕೊಳ್ಳುವುದಕ್ಕೆ ಮತ್ತು ಆರೋಗ್ಯ ಪೂರ್ಣ ಬದುಕು ಕಟ್ಟಿಕೊಳ್ಳಲು ಇಂತಹ ಧಾರ್ಮಿಕ ಸಭೆಗಳು ಔಚಿತ್ಯ ಪೂರ್ಣವಾಗಿವೆ ಎಂದು ಪ್ರತಿಪಾದಿಸಿದರು.

ಸಮಾರಂಭವನ್ನು ದೀಪ ಬೆಳಗಿಸಿ, ಉದ್ಘಾಟಿಸಿದ ಮಾಜಿ ಶಾಸಕ ಬಿ.ಪಿ. ಹರೀಶ್ ಮಾತನಾಡಿ, ಹಿಂದೂ ಧರ್ಮಕ್ಕೆ ಧಕ್ಕೆ ಉಂಟಾದರೆ ನಾವಿದ್ದೇವೆ ಎಂಬ ರಂಭಾಪುರಿ ಶ್ರೀಗಳ ಹೇಳಿಕೆ ಸ್ವಾಗತಾರ್ಹ. ಧರ್ಮಗಳ ನಡುವೆ ನಡೆಯುತ್ತಿರುವ ಸಂಘರ್ಷಗಳು ನಿಲ್ಲಬೇಕು. ಎಲ್ಲರೂ ಪ್ರೀತಿ - ವಿಶ್ವಾಸದಿಂದ ಹೋಗೋಣ ಎಂದರು.

ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್ ಮಾತನಾಡಿ, ಗ್ರಾಮದ ಎಲ್ಲಾ ದೇವರಗಳೂ ರಂಭಾಪುರಿ ಶ್ರೀಗಳ ಆಶೀರ್ವಾದ ಬೇಡಿವೆ. ಶ್ರೀಗಳ ಪಾದಸ್ಪರ್ಶದಿಂದ ಗ್ರಾಮದಲ್ಲಿ ಮಹಾಬೆಳಕು ಮೂಡಲಿದೆ ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಶಾಸಕ ಎಸ್.ರಾಮಪ್ಪ ಮಾತನಾಡಿ, ಕುಣೆಬೆಳಕೆರೆ ಗ್ರಾಮದ ಅಭಿವೃದ್ಧಿಗೆ ಇದುವರೆಗೆ ಸುಮಾರು 1 ಕೋಟಿ ರೂ. ಅನುದಾನ ನೀಡಿದ್ದೇನೆಂದರು.

ಧರ್ಮ, ಧರ್ಮಗಳ ನಡುವೆ ಗಲಾಟೆ ಮಾಡಿಸಿ, ಲಾಭ ಪಡೆಯುವ ಸಂಕುಚಿತ ಬುದ್ದಿ ಬಿಟ್ಟು, ಬದುಕಿರುವಷ್ಟು ದಿನ ಎಲ್ಲರೂ ಪ್ರೀತಿ, ವಿಶ್ವಾಸದಿಂದ ಹೋಗೋಣ ಮತ್ತು ಗ್ರಾಮಗಳಲ್ಲಿ ಚುನಾವಣೆ ಬಂದಾಗ ಮಾತ್ರ ರಾಜಕೀಯ ಮಾಡಿ, ನಂತರ ಎಲ್ಲರೂ ಒಂದಾಗಿ ಹೋಗಿ ಎಂದು ರಾಮಪ್ಪ ಮನವಿ ಮಾಡಿದರು.

ಲಿಂಗದಹಳ್ಳಿ ಹಿರೇಮಠದ ಶ್ರೀ ವೀರಭದ್ರೇಶ್ವರ ಶಿವಾಚಾರ್ಯ ಸ್ವಾಮೀಜಿ, ಕಡೇನಂದಿಹಳ್ಳಿಯ ಶ್ರೀ ರೇವಣಸಿದ್ದೇಶ್ವರ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು.

ಜಿಲ್ಲಾ ಬಿಜೆಪಿ ಅಧ್ಯಕ್ಷ ಹನಗವಾಡಿ ವೀರೇಶ್, ಜಿ.ಪಂ. ಮಾಜಿ ಸದಸ್ಯ ಎಂ. ನಾಗೇಂದ್ರಪ್ಪ, ನಿವೃತ್ತ ಪೊಲೀಸ್ ಅಧಿಕಾರಿ ಕುಣೆಬೆಳಕೆರೆ ದೇವೇಂದ್ರಪ್ಪ, ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್, ತಾ.ಪಂ. ಮಾಜಿ ಅಧ್ಯಕ್ಷ ಎಸ್.ಜಿ. ಪರಮೇಶ್ವರಪ್ಪ, ಐರಣಿ ಅಣ್ಣಪ್ಪ, ಬೆಳ್ಳೂಡಿ ಮಂಜುಳಮ್ಮ, ಗ್ರಾ.ಪಂ. ಅಧ್ಯಕ್ಷೆ ಚಂದ್ರಮ್ಮ ಬೀರಪ್ಪ, ಡಿಸಿಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಜಿಗಳಿ ಆನಂದಪ್ಪ, ರೈಸ್ ಮಿಲ್ ಮಾಲೀಕರಾದ ಕುಂಬಳೂರು ವಿರೂಪಾಕ್ಷಪ್ಪ, ಯಕ್ಕನಹಳ್ಳಿ ಬಸವರಾಜಪ್ಪ, ದೇವಸ್ಥಾನ ಸಮಿತಿಯ ಅಧ್ಯಕ್ಷ ಭೋವಿ ಅಂಜಿನಪ್ಪ, ಗೌಡ್ರ ಚನ್ನಪ್ಪ, ಸುಂಕದರ ನಿಂಗಪ್ಪ, ಮಡಿವಾಳರ ಮಲ್ಲೇಶಪ್ಪ, ಎಪಿಎಂಸಿ ಮಾಜಿ ಸದಸ್ಯ ರುದ್ರಪ್ಪ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

ನಿವೃತ್ತ ಪ್ರಾಧ್ಯಾಪಕ ಬಿ.ಎಂ. ಸದಾಶಿವಯ್ಯ ಸ್ವಾಗತಿಸಿದರು. ಶಿಕ್ಷಕ ವಿ.ಬಿ. ಕೊಟ್ರೇಶಪ್ಪ ನಿರೂಪಿಸಿ, ವಂದಿಸಿದರು.

ಶಿಕ್ಷಕ ಶಿವಾನಂದಪ್ಪ, ಭಾನುವಳ್ಳಿಯ ಪರಮೇಶ್ವರಪ್ಪ, ಮೌನೇಶ್ವರಾಚಾರಿ, ನಂದಿಗಾವಿ ಈಶ್ವರಪ್ಪ, ಹಲಗೇರಿ ಗುಡ್ಡರಾಜ ಮತ್ತಿತರರು ಹಾಡುಗಳನ್ನು ಹಾಡಿದರು.

### ಮಂಡ್ಯ - ಹಡಗಲಿ 47 ರಾಜ್ಯ ಹೆದ್ದಾರಿ ವಿಸ್ತರಣೆ

## ವಾರದೊಳಗೆ ಅಕ್ರಮ ಮನೆ-ಮಳಿಗೆ ತೆರವಿಗೆ ಶಾಸಕ ರಾಮಚಂದ್ರ ಸೂಚನೆ



ಹರಪನಹಳ್ಳಿ, ಫೆ.25- ಅರಸಿಕೆರೆ ಗ್ರಾಮದ ಸರ್ವತೋಮುಖ ಅಭಿವೃದ್ಧಿಗೆ ಮಂಡ್ಯ-ಹಡಗಲಿ 47 ರಾಜ್ಯ ಹೆದ್ದಾರಿ ವಿಸ್ತರಣೆ ಅನಿವಾರ್ಯವಾಗಿದ್ದು, ರಸ್ತೆ ಮಧ್ಯಭಾಗದಿಂದ 35 ಅಡಿ ಮಿತಿಯೊಳಗೆ ಬರುವ ಅಕ್ರಮ ಮನೆ, ಮಳಿಗೆಯನ್ನು ವಾರದ ಗಡುವಿನೊಳಗೆ ತೆರವುಗೊಳಿಸುವಂತೆ ಶಾಸಕ ಎಸ್.ವಿ ರಾಮಚಂದ್ರ ಸೂಚಿಸಿದರು.

ಅರಸಿಕೆರೆ ಗ್ರಾಮ ಪಂಚಾಯಿತಿ ಆವರಣದಲ್ಲಿ ಬುಧವಾರ ಶಾಂತಿ ಸಭೆ ನಡೆಸಿ ಮಾತನಾಡಿದ ಅವರು, ರಸ್ತೆ ವಿಸ್ತರಣೆಯಿಂದ ಭಾಗಶಃ ಮನೆ ಕಳೆದುಕೊಂಡ ನಿರಾಶ್ರಿತರಿಗೆ ಗ್ರಾಮದಲ್ಲಿ ಸರ್ಕಾ ರದ ಜಾಗ ಗುರುತಿಸಿ ಆಶ್ರಯ ಮನೆಯ ಭರವಸೆ ನೀಡಿದರು.

ಹರಪನಹಳ್ಳಿ ತಾಲ್ಲೂಕು ಅಲ್ಲದೆ, ಜಗಳೂರು ವಿಧಾನ ಸಭಾ ಕ್ಷೇತ್ರದ ಅತೀ ದೊಡ್ಡ ಹೋಬಳಿ ಕೇಂದ್ರವಾಗಿದೆ. ಮಾದರಿ ಹೋಬಳಿ ಕೇಂದ್ರವಾಗಿಸಲು ಸ್ವಯಂ ಪ್ರೇರಿತರಾಗಿ ಸಹಕಾರ ನೀಡ ಬೇಕು. ಅಧಿಕಾರಿಗಳು ಯಾರ ಒತ್ತಡಕ್ಕೂ ಮಣೆಯದೇ ನಿಗದಿತ ಅಳತೆಯನ್ನು ಗುರುತಿಸಬೇಕು. ಕಾಮಗಾರಿಯನ್ನು ಮುಂದಿನ ಕಾರ್ತಿಕೋತ್ಸವದ ಜಾತ್ರೆಯ ಒಳಗೆ ಮುಗಿಸಬೇಕು ಎಂದು ಸೂಚಿಸಿದರು.

ಪಿಡಬ್ಲ್ಯೂಡಿ ಇಂಜಿನಿಯರ್ ನಿಂಗಪ್ಪ ಮಾತನಾಡಿ, ರಾಜ್ಯ ಹೆದ್ದಾರಿಯನ್ನು ರಸ್ತೆ ಮಧ್ಯದಿಂದ 40 ಅಡಿ ನಿರ್ಮಾಣ ಮಾಡುವ ನಿರ್ದೇಶನ ಇದೆ. ಆದರೆ ಶಾಸಕರ ಸೂಚನೆ ಮೇರೆಗೆ 35 ಅಡಿ ನಿರ್ಮಾಣಕ್ಕೆ ತೀರ್ಮಾನಿಸಲಾಗಿದೆ. ಕೂಡಲೇ ನಿವಾಸ, ಮಳಿಗೆ ತೆರವುಗೊಳಿಸಿ ಸಹಕರಿಸಬೇಕು ಎಂದು ಮನವಿ ಮಾಡಿದರು.

ಇಲಾಖೆಯಿಂದ ಮನೆ ತೆರವುಗೊಳಿಸಿ ನಿರಾಶ್ರಿತರಿಗೆ ಮಾನವೀಯತೆ ಆಧಾರದಲ್ಲಿ ಪರಿಹಾರ ನೀಡುವಂತೆ ಒತ್ತಾಯಕ್ಕೆ ಪ್ರತಿಕ್ರಿಯಿಸಿದ ಅವರು, ಇಲಾಖೆಯಿಂದ ಪರಿಹಾರ ನೀಡುವ ವ್ಯವಸ್ಥೆ ಇಲ್ಲ ಎಂದು ಸ್ಪಷ್ಟಪಡಿಸಿದರು. ಮಧ್ಯ ಪ್ರವೇಶಿಸಿದ ಶಾಸಕ ಎಸ್.ವಿ ರಾಮಚಂದ್ರ ನಿವೇಶನದ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಅಕ್ಕಮ್ಮ ಲಕ್ಷ್ಮಣ, ಉಪಾಧ್ಯಕ್ಷ ಅಡ್ಡೇರ ಚನ್ನವೀರಪ್ಪ, ಮುಖಂಡರಾದ ವೈ.ಡಿ ಅಣ್ಣಪ್ಪ, ಪ್ರಶಾಂತ್ ಪಾಟೀಲ್, ಸಲಾಂ ಸಾಬ್, ಆನಂದಪ್ಪ, ಕೆ.ಎಂ ವಿಶ್ವನಾಥಯ್ಯ, ಕೊಟ್ರೇಶ್, ಪಂಪಣ್ಣ, ವೆಂಕಟೇಶ್ ಶೆಟ್ರು ಇದ್ದರು.

## ಜಯಮ್ಮ ಗೋಪಿನಾಯ್ಕ ಪಾಲಿಕೆ ನೂತನ ಮೇಯರ್

**(1ನೇ ಪುಟದಿಂದ)** ಅವರುಗಳು ಬೆಂಗಳೂರಿನಿಂದ ಹೆಲಿಕಾಪ್ಟರ್ ಮೂಲಕ ದಾವಣಗೆರೆಗೆ ಆಗಮಿಸಿ, ಜಿಎಂಐಟಿ ಅತಿಥಿ ಗೃಹಕ್ಕೆ ತೆರಳಿ, ನಂತರ ಪಾಲಿಕೆಗೆ ಆಗಮಿಸಿ ಮತ ಚಲಾಯಿಸಿದರು. ಮತ್ತೊಂದೆಡೆ ಬಿಜೆಪಿ ಸದಸ್ಯರು ಬಸ್‌ನಲ್ಲಿ ಒಟ್ಟಿಗೆ ಪಾಲಿಕೆ ಆವರಣಕ್ಕೆ ಬಂದರೆ, ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕ ರವೀಂದ್ರನಾಥ್ ನಂತರ ಆಗಮಿಸಿ ಚುನಾವಣಾ ಪ್ರಕ್ರಿಯೆಯಲ್ಲಿ ಪಾಲ್ಗೊಂಡರು.

ಇತ್ತ ಶಾಸಕ ಶಾಮನೂರು ಶಿವಶಂಕರಪ್ಪ ಅವರೊಂದಿಗೆ ಎಂ.ಎಲ್.ಸಿ.ಗಳಾದ ಯು.ಬಿ. ವೆಂಕಟೇಶ್, ಮೋಹನ್ ಕೊಂಡಜ್ಜಿ ಆಗಮಿಸಿದರೆ, ವಿಪಕ್ಷ ನಾಯಕ ಎ.ನಾಗರಾಜ್ ನೇತೃತ್ವದಲ್ಲಿ ಕಾಂಗ್ರೆಸ್ ಸದಸ್ಯರು ಆಗಮಿಸಿದ್ದರು. ಒಟ್ಟಾರೆ ಚುನಾವಣೆಯಲ್ಲಿ ಎರಡೂ ಪಕ್ಷಗಳ ಏಳು ಜನ ವಿಧಾನ ಪರಿಷತ್ ಸದಸ್ಯರು ಭಾಗವಹಿಸಿದ್ದರು.

ದೂಡಾ ಅಧ್ಯಕ್ಷ ದೇವರಮನೆ ಶಿವಕುಮಾರ್, ಮಾಜಿ ಅಧ್ಯಕ್ಷರುಗಳಾದ ರಾಜನಹಳ್ಳಿ ಶಿವಕುಮಾರ್, ಯಶವಂತರಾವ್ ಜಾಧವ್, ಪಾಲಿಕೆ ಮಾಜಿ ಸದಸ್ಯ ಶಿವನಗೌಡ ಟಿ.ಪಾಟೀಲ್ ಇತರರು ಚುನಾವಣಾ ಪ್ರಕ್ರಿಯೆ ಮುಗಿಯವವರೆಗೆ ಪಾಲಿಕೆ ಆವರಣದಲ್ಲಿದ್ದು ನೂತನ ಮೇಯರ್‌ಗೆ ಅಭಿನಂದಿಸಿದರು.

### ಕಾಂಗ್ರೆಸ್‌ನವರು ರಾಜಕೀಯ ನಿರುದ್ಯೋಗಿಗಳಾಗಿದ್ದಾರೆ

ಕಾಂಗ್ರೆಸ್‌ನವರು ರಾಜಕೀಯ ನಿರುದ್ಯೋಗಿಗಳಾಗಿದ್ದಾರೆ ಎಂದು ವಿಧಾನ ಪರಿಷತ್ ಸದಸ್ಯ ಎನ್.ರವಿಕುಮಾರ್ ವ್ಯಂಗ್ಯವಾಡಿ ದರು. ಪಾಲಿಕೆ ಆವರಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಚುನಾವಣೆಗಳಲ್ಲಿ ಕಾಂಗ್ರೆಸ್ ಗೆದ್ದಾಗ ಮಾತ್ರ ಚುನಾವಣೆ ಸುಲಲಿತವಾಗಿ ನಡೆದಿದೆ. ಬಿಜೆಪಿಯವರು ಗೆದ್ದಾಗ ಮಾತ್ರ ಇವಿಎಂ ಕೆಟ್ಟು ಹೋಗಿದೆ. ಕಾಂಗ್ರೆಸ್‌ಗೆ ಹಾಕಿದ ಮತ ಗಳು ಬಿಜೆಪಿಗೆ ಪರಿವರ್ತನೆ ಆಗುತ್ತಿವೆ ಎಂದು ಹೇಳುವ ಕಾಂಗ್ರೆಸ್‌ನವರ ಹೇಳಿಕೆಗಳು ಹತಾಷೆಯಿಂದ ಹೇಳುವ ಹೇಳಿಕೆಗಳು. ಇಂದು ಕಾಂಗ್ರೆಸ್ ನಿಜವಾಗಿ ಸೋತಿದೆ. ಇಡೀ ದೇಶದಲ್ಲಿ ಕಾಂಗ್ರೆಸ್ ಬಗ್ಗೆ ಜನರು ಒಲವು ತೋರಿಸುತ್ತಿಲ್ಲ ಎಂದರು.

### ಎಲ್ಲೋ ಗೆದ್ದವರಿಂದ ಇಲ್ಲಿ ಮತದಾನ ಸರಿಯಲ್ಲ

ಎಲ್ಲೋ ಗೆದ್ದಿರುವ ವಿಧಾನ ಪರಿಷತ್ ಸದಸ್ಯರು ಬೇರೆಡೆ ಬಂದು ಮತದಾನ ಮಾಡಿದ್ದಾರೆ. ಈ ರೀತಿ ಮುಂದೆ ಆಗದಂತೆ ತಡೆ ಯಲು ನ್ಯಾಯಾಲಯಕ್ಕೆ ಹೋಗುವ ಚಿಂತನೆಯಿದೆ ಎಂದು ವಿಧಾನ ಪರಿಷತ್ ಸದಸ್ಯ ಮೋಹನ್ ಕೊಂಡಜ್ಜಿ ಹೇಳಿದರು. ವಿಧಾನ ಪರಿಷತ್ತಿನ ಸದಸ್ಯರು ಎಲ್ಲಿ ಆಯ್ಕೆ ಆಗಿರುತ್ತಾರೋ, ಅಲ್ಲಿಯೇ ಇರಬೇಕು. ಆದರೆ ಈ ರೀತಿ ಅಧಿಕಾರ ಪಡೆಯಲು ಎಲ್ಲೋ ಬಂದು ಮತದಾನ ಮಾಡುವುದು ತಪ್ಪು. ಇದು ಸರಿಯಲ್ಲ. ಮುಂದಿನ ದಿನಗಳಲ್ಲಿ ಇಂತಹ ವರ್ತನೆ ನಿಲ್ಲಬೇಕು ಎಂದು ಹೇಳಿದರು.

### 4 ಸ್ಥಾಯಿ ಸಮಿತಿಗೆ ಆಯ್ಕೆ

**ಮಹಾನಗರ ಪಾಲಿಕೆಯ ವಿವಿಧ ಸ್ಥಾಯಿ ಸಮಿತಿಗೆ ಮತದಾನದ ಮೂಲಕ ಆಧ್ಯಕ್ಷರನ್ನು ಆಯ್ಕೆ ಮಾಡಲಾಯಿತು. ತೆರಿಗೆ ಮತ್ತು ಹಣಕಾಸು ಸ್ಥಾಯಿ ಸಮಿತಿ ಅಧ್ಯಕ್ಷರಾಗಿ ಸೋಗಿ ಶಾಂತ ಕುಮಾರ್, ಆರೋಗ್ಯ, ಶಿಕ್ಷಣ ಮತ್ತು ಸಾಮಾಜಿಕ ನ್ಯಾಯ ಸಮಿತಿ ಅಧ್ಯಕ್ಷರಾಗಿ ಪಕ್ಷೇತರ ಸದಸ್ಯ ಉದಯ ಕುಮಾರ್, ಲೆಕ್ಕಪತ್ರ ಸ್ಥಾಯಿ ಸಮಿತಿ ಅಧ್ಯಕ್ಷರಾಗಿ ಮಂಜಾನಾಯ್ಕ, ನಗರ ಯೋಜನೆ ಸ್ಥಾಯಿ ಸಮಿತಿ ಅಧ್ಯಕ್ಷರಾಗಿ ರಾಕೇಶ್ ಜಾಧವ್ ಆಯ್ಕೆಯಾಗಿದ್ದಾರೆ.**

### ಅಭಿವೃದ್ಧಿಗೆ ಶ್ರಮಿಸುವೆ: ಮೇಯರ್

ನಗರದ ಸಮಸ್ಯೆಗಳ ಬಗ್ಗೆ ತಿಳಿದುಕೊಂಡು ಹಂತ ಹಂತವಾಗಿ ಅಭಿವೃದ್ಧಿಗೆ ಶ್ರಮಿಸುತ್ತೇನೆ ಎಂದು ನೂತನ ಮೇಯರ್ ಜಯಮ್ಮ ಗೋಪಿನಾಯ್ಕ ಹೇಳಿದ್ದಾರೆ. ಪತ್ರಕರ್ತರೊಂದಿಗೆ ಮಾತನಾಡಿದ ಅವರು, ನನ್ನ ಅವಧಿಯಲ್ಲಿ ಉತ್ತಮ ಕೆಲಸ ಮಾಡುತ್ತೇನೆ. ನೀರು, ಒಳಚರಂಡಿ ಸೇರಿದಂತೆ ಮೂಲ ಸೌಕರ್ಯಗಳಿಗೆ ಒತ್ತು ನೀಡುತ್ತೇನೆ ಎಂದರು.

## ಹೊನ್ನಾಳಿಗೆ ಉಪವಿಭಾಗಾಧಿಕಾರಿಗಳ ಕಛೇರಿ



ಹೊನ್ನಾಳಿ, ಫೆ.25- ಉಪ ವಿಭಾಗಾಧಿಕಾರಿಗಳ ನೂತನ ಕಚೇರಿ ಹೊನ್ನಾಳಿಯಲ್ಲಿ ಸ್ಥಾಪನೆಯಾಗುತ್ತಿರುವ ಹಿನ್ನೆಲೆಯಲ್ಲಿ ದಾವಣಗೆರೆ ಉಪ ವಿಭಾಗಾಧಿಕಾರಿ ಕಚೇರಿಯಿಂದ ಹೊನ್ನಾಳಿ ಕಚೇರಿಗೆ ಸಂಬಂಧಿಸಿದ ಕಡತಗಳನ್ನು ಶುಕ್ರವಾರ ಸ್ಥಳಾಂತರಿಸಲಾಯಿತು. ಗ್ರಾಮ ಲೆಕ್ಕಾಧಿಕಾರಿಗಳು ಸೇರಿದಂತೆ ಕಂದಾಯ ಇಲಾಖೆಯ ಸಿಬ್ಬಂದಿ ಕಡತಗಳ ಸ್ಥಳಾಂತರ ಕಾರ್ಯದಲ್ಲಿ ಸಹಕರಿಸಿದರು. ಎಸಿ ಹುಲ್ಲುಮನಿ ತಿಮ್ಮಣ್ಣ, ಉಪ ತಹಶೀಲ್ದಾರ್ ಟಿ. ಸುರೇಶ್‌ನಾಯ್ಕ ಇದ್ದರು.

### ಕೊಟ್ಟೂರು ಬ್ಲಾಕ್ ಕಾಂಗ್ರೆಸ್‌ಗೆ ಇಮಂತ್ ಅಧ್ಯಕ್ಷ

ಕೊಟ್ಟೂರು, ಫೆ.25- ಕೊಟ್ಟೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾಗಿ ಇಮಂತ್ ಧಾರುಕೇಶ್ ನೇಮಕಗೊಂಡಿದ್ದಾರೆ. ಹಗರಿಬೊಮ್ಮನಹಳ್ಳಿ ಶಾಸಕ ಎಸ್.ಭೀಮನಾಯ್ಕ ಅವರ ಜನ ಸಂಪರ್ಕ ಕಛೇರಿಯಲ್ಲಿ ಈ ನೇಮಕ ಮಾಡಿ ಆದೇಶ ಹೊರಡಿಸಲಾಯಿತು.

ಈ ಸಂದರ್ಭದಲ್ಲಿ ಮುಖಂಡರಾದ ಅಕ್ಕಿ ತೋಟೇಶ್, ರಾಮಣ್ಣ, ಬೂದಿ ಶಿವಕುಮಾರ್, ಅನಿಲ್, ಆಕರ್ಷ್, ವೆಂಕಟೇಶ್, ಶಿವು, ಪ್ರಭುದೇವ್ ಉಪಸ್ಥಿತರಿದ್ದರು.

### ಗುತ್ತೂರು ಪಿಡಿಒ ಅಮಾನತ್ತು

#### ದಸಂಸ ಹೋರಾಟಕ್ಕೆ ಸಂದ ಜಯ: ಮಹಾಂತೇಶ್

ಹರಿಹರ,ಫೆ.25- ತಾಲ್ಲೂಕಿನ ಗುತ್ತೂರು ಗ್ರಾ.ಪಂ.ನಲ್ಲಿ ನಡೆದ ಗಣ ರಾಜ್ಯೋತ್ಸವದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಭಾವಚಿತ್ರವ ನ್ನಿಡದೆ ಅವಮಾನವೆಸಗಿದ ಪ್ರಕರಣದಲ್ಲಿ ಪಿಡಿಒ ಎನ್.ವಿಜಯಲಕ್ಷ್ಮಿ ಅವರನ್ನು ಅಮಾನತ್ತುಗೊಳಿಸಿ ಜಿಪಂ ಸಿಇಒ ಡಾ.ವಿಜಯ ಮಹಾಂತೇಶ್ ದಾನಮ್ಮನವರ್ ಆದೇಶಿಸಿದ್ದಾರೆ. ದಲಿತ ಸಂಘರ್ಷ ಸಮಿತಿ (ಪ್ರೊ.ಬಿ.ಕೃಷ್ಣಪ್ಪ ಸ್ಥಾಪಿತ) ತಾಲ್ಲೂಕು ಸಮಿತಿಯಿಂದ ದೂರು ನೀಡಲಾಗಿತ್ತು. ಪ್ರಕರಣದ ಕುರಿತು ಸ್ಥಳ ಪರಿಶೀಲನೆ ನಡೆಸಿದ್ದ ಸಮಾಜ ಕಲ್ಯಾಣ ಇಲಾಖಾಧಿಕಾರಿಗಳು ಪಿಡಿಒ ಲೋಪವೆಸಗಿರುವುದರ ಕುರಿತು ವರದಿಯನ್ನು ನೀಡಿದ್ದರು. ವರದಿ ಯನ್ನು ಪರಿಶೀಲಿಸಿದ ಜಿಪಂ ಸಿಇಒ ಫೆ.22ರಂದು ಅಮಾನತ್ತು ಆದೇಶ ಹೊರಡಿಸಿದ್ದಾರೆ.

## ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಸಾಮಾಜಿಕ ನ್ಯಾಯ ಲಭಿಸಲಿ : ಜಗಳೂರಿನ ನ್ಯಾ. ತಿಮ್ಮಯ್ಯ



ಜಗಳೂರು, ಫೆ.25- ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಸಾಮಾಜಿಕ ನ್ಯಾಯ ಹಾಗೂ ಸರ್ಕಾರಿ ಸೌಲಭ್ಯಗಳು ಲಭಿಸಲಿ ಎಂದು ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶ ಜಿ. ತಿಮ್ಮಯ್ಯ ಅಭಿಪ್ರಾಯ ವ್ಯಕ್ತಪಡಿಸಿದರು.

ಪಟ್ಟಣದ ನ್ಯಾಯಾಲಯದ ಸಭಾಂಗಣದಲ್ಲಿ ವಕೀಲರ ಸಂಘ ಹಾಗೂ ತಾಲ್ಲೂಕು ಕಾನೂನು ಸೇವಾ ಸಮಿತಿ ಸಹಯೋಗದಲ್ಲಿ ಹಮ್ಮಿಕೊಂಡಿದ್ದ 'ವಿಶ್ವ ಸಾಮಾಜಿಕ ನ್ಯಾಯ ದಿನಾಚರಣೆ' ಕಾರ್ಯಕ್ರಮವನ್ನು ಸಸಿಗೆ ನೀರೆರೆಯುವ ಮೂಲಕ ಉದ್ಘಾಟಿಸಿ ಮಾತನಾಡಿದರು. ಸಮಾಜದಲ್ಲಿ ಜನಸಾಮಾನ್ಯರಿಗೆ ದೊರೆಯುವ ಸೌಲಭ್ಯಗಳು ಕೇವಲ ಉಳ್ಳವರ ಪಾಲಾಗುತ್ತಿವೆ. ಪ್ರತಿಯೊಬ್ಬರೂ ಶಿಕ್ಷಣ ಪಡೆದು ಸಂವಿಧಾನ ಬದ್ದ ಹಕ್ಕು ಮತ್ತು ಮೂಲಭೂತ ಕರ್ತವ್ಯ ಅರಿತು ಸರ್ಕಾರದಿಂದ ಸೌಲಭ್ಯಗಳನ್ನು ಅರ್ಹರು ಪಡೆಯಲು ಮುಂದಾಗಬೇಕು ಎಂದು ಕರೆ ನೀಡಿದರು.

ಹಿರಿಯ ವಕೀಲ ಕೆ.ಎಂ. ಬಸವರಾಜಪ್ಪ ಮಾತನಾಡಿ, ಪರಿಶಿಷ್ಟರಿಗೆ ಸಂವಿಧಾನ ತಿದ್ದುಪಡಿಯ ಮೂಲಕ ಸರ್ಕಾರ ಹಲವಾರು ಯೋಜನೆಗಳನ್ನು ರೂಪಿಸಿದೆ. ಸಾಮಾನ್ಯರು ಸದುಪಯೋಗ ಪಡೆಯಬೇಕು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗಗಳು ಕಾರ್ಯನಿರ್ವಹಿಸುತ್ತಿದ್ದು. 62 ನೇ ತಿದ್ದುಪಡಿ ಮೂಲಕ ರಾಜಕೀಯ ಮೀಸಲಾತಿ ಸೌಲಭ್ಯ ತಿದ್ದುಪಡಿಯಾಗಿದೆ. 62 ಮತ್ತು 65 ನೇ ತಿದ್ದುಪಡಿಯಿಂದ ಶಿಕ್ಷಣ ಸಂಸ್ಥೆಗಳನ್ನು ರಚಿಸಲು ಅವಕಾಶ ಕಲ್ಪಿಸಲಾಗಿದೆ ಎಂದರು.

ಈ ಸಂದರ್ಭದಲ್ಲಿ ವಕೀಲರಾದ ತಿಪ್ಪೇಸ್ವಾಮಿ, ಕರಿಬಸಯ್ಯ, ಓಬಳೇಶ್, ಶರಣಪ್ಪ, ಎಚ್. ಬಸವರಾಜಪ್ಪ, ಪಂಪಣ್ಣ, ರುದ್ರೇಶ್, ಡಿ.ವಿ. ನಾಗಪ್ಪ ಉಪಸ್ಥಿತರಿದ್ದರು.

### ಪಂಪ್‌ಸೆಟ್‌ಗೆ ಹಗಲಿನಲ್ಲಿ ನಿರಂತರ ವಿದ್ಯುತ್

**(1ನೇ ಪುಟದಿಂದ)** ಮುಖ್ಯ ಇಂಜಿನಿಯರುಗಳನ್ನೇ ಹೊಣೆಗಾರರಾಗಿ ಮಾಡಲಾಗುವುದು ಎಂದವರು ಎಚ್ಚರಿಸಿದ್ದಾರೆ.

ಮುಂದೆ ಎದುರಾಗಬಹುದಾದ ಯಾವುದೇ ಪರಿಸ್ಥಿತಿಯನ್ನು ಎದುರಿಸಲು ಈಗಿನಿಂದಲೇ ಸಿದ್ಧರಾಗುವಂತೆ ಅಧಿಕಾರಿಗಳಿಗೆ ಆದೇಶ ಮಾಡಿದ್ದೇನೆ.

ಯಾವುದೇ ವಲಯದಲ್ಲಿ ವಿದ್ಯುತ್ ಪೂರೈಕೆಯಲ್ಲಿ ಉಂಟಾಗುವ ತಾಂತ್ರಿಕ ಹಾಗೂ ತಾಂತ್ರಿಕೇತರ ಸಮಸ್ಯೆಯ ಸೂಚನೆ ನೀಡಿದ್ದೇನೆ.

ರೈತರು ಮತ್ತು ಸಾರ್ವಜನಿಕರಿಗೆ ವಿದ್ಯುತ್ ವ್ಯತ್ಯಯದಿಂದ ಆಗುವ ತೊಂದರೆಯನ್ನು ಕರ್ತವ್ಯಲೋಪ ಎಂದೇ ಪರಿಗಣಿಸಲಾಗುವುದು ಎಂದವರು ಹೇಳಿದ್ದಾರೆ.

ಸಾಮಾನ್ಯ ದಿನಗಳ ವಿದ್ಯುತ್ ಬಳಕೆ ಪ್ರಮಾಣ ಕಳೆದ ವರ್ಷಕ್ಕಿಂತ ಹೆಚ್ಚಿದೆ, ಇಷ್ಟಾದರೂ ನಮ್ಮಲ್ಲಿ ಕೊರತೆ ಇಲ್ಲ. ಆದರೆ, ಸರಬರಾಜು ವೇಳೆ ಸಮಸ್ಯೆಗಳಾಗುತ್ತಿವೆ. ಈ ಸಮಸ್ಯೆಗಳನ್ನು ಬಗೆಹರಿಸಿ ಕೃಷಿ ಪಂಪ್‌ಸೆಟ್‌ಗಳಿಗೆ ನಿಯಮಾವಳಿಯಂತೆ ಏಳು ಗಂಟೆ ವಿದ್ಯುತ್ ಪೂರೈಸುವಂತೆ ಅಧಿಕಾರಿಗಳಿಗೆ ಆದೇಶ ಮಾಡಿರುವುದಾಗಿ ಸಚಿವರು ತಿಳಿಸಿದರು.


**ಪ್ರಥಮ ವರ್ಷದ ಪುಣ್ಯ ಸ್ಮರಣೆ**



ನನ್ನ ತಂದೆಯವರಾದ

**ಶ್ರೀ ಬಾಬುರಾವ್ ದಾಮೋದರ್**

ಇವರ ಮೊದಲನೇ ವರ್ಷದ ಪುಣ್ಯ ತಿಥಿಯನ್ನು

**ದಿನಾಂಕ : 26.02.2022ರ ಶನಿವಾರ ಬೆಳಿಗ್ಗೆ 11.00 ಗಂಟೆಗೆ**

**ನಮ್ಮ ಸ್ವಗೃಹ ಕುಂದವಾಡ ರಸ್ತೆ, ಚಿಗಟೇರಿ ಲೇಔಟ್,**

**4ನೇ ಕ್ರಾಸ್ ಸಪ್ತಗಿರಿ ಶಾಲೆ ಹಿಂಭಾಗ, ದಾವಣಗೆರೆ.**

ಇಲ್ಲಿ ನೆರವೇರಿಸಲಾಗುವುದು. ಕಾರಣ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಲು ವಿನಂತಿಸಿಕೊಳ್ಳುತ್ತೇವೆ.

ಇಂತಿ ದುಃಖತಪ್ತರು :

**ತುಕಾರಾಮ್ ದಾಮೋದರ್, ದಾಮೋದರ್ ವಂಶಸ್ಥರು ಅಣ್ಣ, ತಮ್ಮಂದಿರು ಮತ್ತು ಮಕ್ಕಳು, ಅಳಿಯಂದಿರು ಹಾಗೂ ಬಂಧು-ಮಿತ್ರರು. ಫೋನ್ : 98445 50022**


### ಹರ್ಷ ಕುಟುಂಬಕ್ಕೆ ಎಂಪಿಆರ್ ಸಾಂತ್ವನ

ಹೊನ್ನಾಳಿ,ಫೆ.25- ದುಷ್ಕರ್ಮಿಗಳ ದಾಳಿ ವೇಳೆ ಕೊಲೆಗೀಡಾದ ಹರ್ಷ ಅವರ ಶಿವಮೊಗ್ಗದ ಸೀಗೆಹಟ್ಟಿಯ ಮನೆಗೆ ಸಿಎಂ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ ಭೇಟಿ ನೀಡಿ ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು. ವೈಯಕ್ತಿಕವಾಗಿ ಐದು ಲಕ್ಷ ರೂ. ಹಾಗೂ ಬಿಜೆಪಿ ತಾಲ್ಲೂಕು ಘಟಕದ ವತಿಯಿಂದ ಒಂದು ಲಕ್ಷ ರೂ.ಗಳನ್ನು ನೀಡಿದರು.

### ಇಟಗಿ : ಇಂದಿನಿಂದ ಕುಸ್ತಿ ಪಂದ್ಯ

ರಾಣೇಬೆನ್ನೂರು ತಾಲ್ಲೂಕು ಇಟಗಿ ಗ್ರಾಮದ ಶ್ರೀ ಗುರು ಹಾಲೇಶ್ವರ ಸ್ವಾಮಿಯ ರಥೋತ್ಸವದ ಅಂಗವಾಗಿ ಇಂದು ಶನಿವಾರ ಮತ್ತು ನಾಳೆ ಭಾನುವಾರ ಎತ್ತುಗಳ ಹಾಗೂ ಬೆಲ್ಲದ ಬಂಡಿಗಳ ಮೆರವಣಿಗೆ ನಡೆಯುವುದು. ಜಾತ್ರೆಯ ಅಂಗವಾಗಿ ಜಂಗೀ ಬಯಲು ಕುಸ್ತಿಗಳನ್ನು ಇಂದಿನಿಂದ 3 ದಿನಗಳ ಕಾಲ ಹಮ್ಮಿಕೊಳ್ಳಲಾಗಿದೆ.

## ಯುಕ್ರೇನ್‌ನಲ್ಲಿ ಹರಪನಹಳ್ಳಿ ತಾಲ್ಲೂಕಿನ ನಾಲ್ವರು ವಿದ್ಯಾರ್ಥಿಗಳು






ಹರಪನಹಳ್ಳಿ, ಫೆ.25- ರಷ್ಯಾ ಯುದ್ಧ ಸಾರಿರುವ ಯುಕ್ರೇನ್‌ನಲ್ಲಿ ಹರಪನಹಳ್ಳಿ ತಾಲ್ಲೂಕಿನ ನಾಲ್ವರು ವಿದ್ಯಾರ್ಥಿಗಳು ಸಿಲುಕಿಕೊಂಡು, ಅತಂತ್ರ ಸ್ಥಿತಿಯಲ್ಲಿದ್ದಾರೆ.

ಹರಪನಹಳ್ಳಿ ಪಟ್ಟಣದ ವಿಕಾಸ ಪಾಟೀಲ್, ಸಂಜಯ ಹಾಗೂ ಲಾವ್ಯ ಇದ್ದು, ತಾಲ್ಲೂಕಿನ ಕೆಸರಹಳ್ಳಿ ಗ್ರಾಮದ ಜಿ.ಎನ್. ಗಗನ್ ದೀಪರವರು ಯುಕ್ರೇನ್ ರಾಷ್ಟ್ರದಲ್ಲಿ ಎಂ.ಬಿ.ಬಿ.ಎಸ್ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳಾಗಿದ್ದಾರೆ.

ರಷ್ಯಾ ದಾಳಿ ನಡೆಸಿದ ನಂತರ ಯುಕ್ರೇನ್‌ನಲ್ಲಿ ವಿದ್ಯಾರ್ಥಿಗಳು ಭಯದ ವಾತಾವಾರಣದಲ್ಲಿದ್ದಾರೆ. ಇಲ್ಲಿ ಅವರ ಪೋಷಕರೂ ಸಹ ಮಕ್ಕಳ ಸ್ಥಿತಿಗತಿ ಕುರಿತು ಆತಂಕದಲ್ಲಿ ಕಾಲ ಕಳೆಯುತ್ತಿದ್ದಾರೆ.

ಕಾರ್ಖಿವ್ ನಗರದಲ್ಲಿ ಗಗದೀಪ ಪ್ರಥಮ ವರ್ಷ ಹಾಗೂ ಜಾಪ್ರೋಜಾವ್ ರಾಜ್ಯದಲ್ಲಿ ಕಾಲೇಜ್‌ವೊಂದರಲ್ಲಿ ವಿಕಾಸ ಪಾಟೀಲ್, ಸಂಜಯ್‌ರವರು ಮೂರನೇ ವರ್ಷದ ಮತ್ತು ಪೋಲ್ಯಾಂಡೊದಲ್ಲಿ ಲಾವಣ್ಯ ಎರಡನೇ ವರ್ಷದ ಎಂಬಿಬಿಎಸ್ ಪದವಿ ಅಭ್ಯಾಸ ಮಾಡುತ್ತಿದ್ದಾರೆ.

ಸಂಜಯ್ ಹಾಗೂ ವಿಕಾಸ್ ಪತ್ರಿಕೆ ಜೊತೆಗೆ ಮಾತನಾಡಿ, ನಾವು ಪ್ರಸ್ತುತ ಸುರಕ್ಷಿತವಾಗಿದ್ದೇವೆ. ನಾವಿರುವ ರಾಜ್ಯದ ಮೇಲೆ ಇನ್ನೂ ದಾಳಿ ನಡೆದಿಲ್ಲ.ಯಾವಾಗ ಬೇಕಾದರೂ ದಾಳಿ ನಡೆಯಬಹುದು. ಒಟ್ಟಿನಲ್ಲಿ ಆತಂಕ ಸ್ಥಿತಿ ಎದುರಿಸುತ್ತಿದ್ದೇವೆ ಎಂದು ಹೇಳಿದರು.

ಲಗೇಜ್‌ಗಳೊಂದಿಗೆ ಸಿದ್ಧವಾಗಿರಿ, ಪೋಲ್ಯಾಂಡ್ ಗಡಿಭಾಗಕ್ಕೆ ವಿಮಾನ ಕಳಿಸಿ ತಮ್ಮನ್ನು ಕರೆಸಿಕೊಳ್ಳುತ್ತೇವೆ ಎಂದು ಭಾರತ ಸರ್ಕಾರ ಸೂಚನೆ ನೀಡಿದ ಹಿನ್ನೆಲೆಯಲ್ಲಿ ಸಿದ್ಧರಾಗಿದ್ದೇವೆ ಎಂದು ತಿಳಿಸಿದರು.

ಇತ್ತ ವಿಕಾಸ ಪಾಟೀಲ್ ತಾಯಿ ಶಿಕ್ಷಕಿ ಬಂದಮ್ಮ ಮಾತನಾಡಿ, ನಿನ್ನೆ ಸಂಜೆ ನಮ್ಮ ಮಗನೊಂದಿಗೆ ಮಾತನಾಡಿದ್ದು, ಉಕ್ರೇನ್‌ನಲ್ಲಿ ಭಯದ ವಾತಾವರಣ ಇದೆ. ಉಕ್ರೇನ್ ಸರ್ಕಾರ ಅಲ್ಲಿರುವವರೆಗೆ ತೊಂದರೆಯಾಗದಂತೆ ಬಂಕರ್‌ವೊಂದರ ವ್ಯವಸ್ಥೆ ಮಾಡಿದೆ. ಆದ್ರೆ ಅಲ್ಲಿ ಊಟವಿಲ್ಲ, ಕನಿಷ್ಠ ನೀರು ನೀಡಿಲ್ಲ ಎಂದು ಅಳಲು ತೊಡಿಕೊಂಡಿದ್ದಾರೆ. ನಮ್ಮ ಮಗ ಅಷ್ಟೆ ಅಲ್ಲ, ಎಲ್ಲಾ ಮಕ್ಕಳನ್ನು ಸುರಕ್ಷಿತವಾಗಿ ಕರೆತರಲು ಭಾರತ ಸರ್ಕಾರ, ರಾಜ್ಯ ಸರ್ಕಾರ ವ್ಯವಸ್ಥೆ ಕಲ್ಪಿಸಬೇಕು ಎಂದು ಮನವಿ ಮಾಡಿದ ಅವರು, ಕೊರೊನಾದಿಂದಾಗಿ ಕಳೆದ ಮೂರು ವರ್ಷಗಳಿಂದ ಮಗ ಬಂದಿರಲಿಲ್ಲ ಎಂದು ಆತಂಕ ವ್ಯಕ್ತಪಡಿಸಿದರು.

ಜಿ.ಎನ್.ಗಗನ್‌ದೀಪ ತಾಯಿ ಸುನಂದಾರವರು ಪ್ರತಿಕ್ರಿಯೆ ನೀಡಿ, ನನ್ನ ಪುತ್ರನಿಗೆ ಸದ್ಯ ಸಮಸ್ಯೆ ಇಲ್ಲ, ಚೆನ್ನಾಗಿ ಇದ್ದೇವೆ ಎಂದು ದೂರವಾಣಿ ಮೂಲಕ ತಿಳಿಸಿದ್ದಾನೆ. ನಾಗರಿಕರಿಗೆ ಏನು ಮಾಡುವುದಿಲ್ಲ ಎಂದು ರಷ್ಯಾದವರು ಹೇಳಿದ್ದಾರೆ ಎಂದು ತಿಳಿಸಿದೆ. ಆದರೂ ನಮ್ಮಲ್ಲಿ ಆತಂಕ ಮನೆ ಮಾಡಿದೆ, ಆದಷ್ಟು ಬೇಗ ಕೇಂದ್ರ ಸರ್ಕಾರ ನಮ್ಮ ಪುತ್ರ ಸೇರಿದಂತೆ, ದೇಶದ ಎಲ್ಲಾ ವಿದ್ಯಾರ್ಥಿಗಳನ್ನು ಸುರಕ್ಷಿತವಾಗಿ ಕರೆತರಬೇಕು ಎಂದು ಅಳಲು ತೊಡಿಕೊಂಡರು.

ಹರಪನಹಳ್ಳಿ ಡಿವೈಎಸ್‌ಪಿ ಹಾಲಮೂರ್ತಿರಾವ್ ಉಕ್ರೇನ್‌ನಲ್ಲಿರುವ ಸಂಜಯ್, ವಿಕಾಸ್ ಹಾಗೂ ಇತರೆ ವಿದ್ಯಾರ್ಥಿಗಳೊಂದಿಗೆ ಮಾತನಾಡಿ, ಎದೆಗುಂದಬೇಡಿ ಎಂದು ಧೈರ್ಯ ತುಂಬಿದ್ದಾರೆ.

# ಶಿಕ್ಷಣದ ಜೊತೆಗೆ ಆರೋಗ್ಯದ ಕಡೆಗೂ ನಿಗಾವಹಿಸಿ

## ಜಗಳಿ : ಮಕ್ಕಳ ಉಚಿತ ಆರೋಗ್ಯ ತಪಾಸಣೆಯಲ್ಲಿ ಡಾ.ಶ್ರೀನಿವಾಸ್ ಸಲಹೆ



ಮಲೇಬೆನ್ನೂರು, ಫೆ.25 - ಮಕ್ಕಳು ಶಿಕ್ಷಣದ ಜೊತೆಗೆ ಆರೋಗ್ಯದ ಕಡೆಗೂ ನಿಗಾವಹಿಸಬೇಕೆಂದು ಆದಿತ್ಯ ಚೈಲ್ಡ್ ಕೇರ್ ಸೆಂಟರ್‌ನ ಮಕ್ಕಳ ತಜ್ಞ ಡಾ. ಶ್ರೀನಿವಾಸ್ ಹೇಳಿದರು.

ಜಿಗಳಿ ಗ್ರಾಮದ ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಇಂದು ಹಮ್ಮಿಕೊಂಡಿದ್ದ ಮಕ್ಕಳ ಉಚಿತ ಆರೋಗ್ಯ ತಪಾಸಣೆ ಮತ್ತು ಮಕ್ಕಳ ಆರೋಗ್ಯ ಕುರಿತ ಅರಿವು ಕಾರ್ಯಕ್ರಮದ ನೇತೃತ್ವ ವಹಿಸಿ ಅವರು ಮಾತನಾಡಿದರು.

ಮಕ್ಕಳು ಸ್ವಚ್ಛತೆ ಬಗ್ಗೆ ಅರಿವು ಮೂಡಿಸಿಕೊಳ್ಳಬೇಕು. ಹಣ್ಣು, ಹಾಲು, ತರಕಾರಿ, ಕಾಳುಗಳನ್ನು ಹೆಚ್ಚು ಬಳಸಬೇಕು, ಕ್ರೀಡೆಗಳಲ್ಲೂ ಭಾಗವಹಿಸಿಬೇಕೆಂದ ಅವರು ಟಿ.ವಿ., ಮೊಬೈಲ್‌ನಿಂದ ದೂರವಿರಿ. ದುಶ್ಚಟಗಳ ಕಡೆಗೆ ತಿರುಗಿಯೂ ನೋಡಬೇಡಿ ಎಂದು ಡಾ. ಶ್ರೀನಿವಾಸ್ ಕಿವಿ ಮಾತು ಹೇಳಿದರು.

ಭಾರತೀಯ ವೈದ್ಯಕೀಯ ಸಂಘದ ಮಲೇಬೆನ್ನೂರು ಶಾಖೆಯ ಅಧ್ಯಕ್ಷರೂ ಆದ ವೈದ್ಯ ಡಾ॥ ಬಿ. ಚಂದ್ರಶೇಖರ್ ಮಾತನಾಡಿ, ನಾವು ಓದುವಾಗ ಊಟಕ್ಕೂ ಕಷ್ಟ ಇತ್ತು. ಆದರೆ ಈಗ ಸರ್ಕಾರ ನಿಮಗೆ ಉಚಿತ ಶಿಕ್ಷಣ, ಬಟ್ಟೆ ಜೊತೆಗೆ ಸೈಕಲ್, ಬಿಸಿಯೂಟ, ಹಾಲು, ಮೊಟ್ಟೆ ಎಲ್ಲಾ ನೀಡುತ್ತದೆ. ಜೊತೆಗೆ ನಮ್ಮ ಡಾ. ಶ್ರೀನಿವಾಸ್ ಅವರು ನಿಮ್ಮ ಆರೋಗ್ಯದ ಬಗ್ಗೆ ಆಸಕ್ತಿ ತೋರಿಸಿದ್ದಾರೆಂದು ಮಕ್ಕಳನ್ನು ಹುರಿದುಂಬಿಸಿದರು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮಲೇಬೆನ್ನೂರು ಯೋಜನಾಧಿಕಾರಿ ವಸಂತ್ ದೇವಾಡಿಗ ಮಾತನಾಡಿ, ಮಕ್ಕಳು ಶಿಕ್ಷಣದ ಜೊತೆಗೆ ಸಂಸ್ಕಾರ ಕಲಿಯಬೇಕು. ಬೆಳಿಗ್ಗೆ ಎದ್ದ ತಕ್ಷಣ ತಂದೆ-ತಾಯಿಗಳ ಕಾಲಿಗೆ ನಮಸ್ಕರಿಸಿ, ಹಿರಿಯರನ್ನು ಗೌರವಿಸಿ ಎಂದರು.

ಹಿರಿಯ ವೈದ್ಯ ಡಾ. ಟಿ. ಬಸವರಾಜ್ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಡಿಸಿಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಜಿ. ಆನಂದಪ್ಪ ಮಾತನಾಡಿದರು. ಗ್ರಾಮದ ವೈದ್ಯ ಡಾ.ಎನ್. ನಾಗರಾಜ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಾಲೆಯ ಮುಖ್ಯ ಶಿಕ್ಷಕ ಕರಿಬಸಪ್ಪ ಅಧ್ಯಕ್ಷತೆ ವಹಿಸಿದ್ದರು.

ಎಸ್‌ಡಿಎಂಸಿ ಸದಸ್ಯ ಗಂಗಾಧರಾಚಾರಿ, ಧರ್ಮಸ್ಥಳ ಯೋಜನೆಯ ಮಲೇಬೆನ್ನೂರು ಮೇಲ್ವಿಚಾರಕ ಸಂತೋಷ್, 'ಜನತಾವಾಣಿ' ವರದಿಗಾರ ಜಿಗಳಿ ಪ್ರಕಾಶ್, ಶಿಕ್ಷಕರಾದ ಮಲ್ಲಿಕಾರ್ಜುನ್, ಲಿಂಗರಾಜ್, ಲೋಕೇಶ್, ದೀಪಾ, ವೀಣಾ, ಜಯಶ್ರೀ ಭಾಗವಹಿಸಿದ್ದರು. ದೈಹಿಕ ಶಿಕ್ಷಕ ಶ್ರೀನಿವಾಸ್ ರೆಡ್ಡಿ ನಿರೂಪಿಸಿದರು. ಶಿಕ್ಷಕ ನಾಗೇಶ್ ಸ್ವಾಗತಿಸಿದರು. ಶಿಕ್ಷಕಿ ಕುಸುಮಾ ವಂದಿಸಿದರು.

# ದಾವಣಗೆರೆ ತಾಲ್ಲೂಕಿನಲ್ಲಿ ನಾಳೆಯಿಂದ ಮಕ್ಕಳ ಪೋಲಿಯೋ ಲಸಿಕಾ ಶಿಬಿರ

## ಅಗತ್ಯ ಸಿದ್ಧತೆ ಕೈಗೊಳ್ಳಲು ಅಧಿಕಾರಿಗಳಿಗೆ ತಹಶೀಲ್ದಾರ್ ಗಿರೀಶ್ ಸೂಚನೆ



ದಾವಣಗೆರೆ ಫೆ. 25- ತಾಲ್ಲೂಕಿನಲ್ಲಿ ನಾಡಿದ್ದು ದಿನಾಂಕ 27 ರಿಂದ ಮಾರ್ಚ್ 2 ರವರೆಗೆ ನಾಲ್ಕು ದಿನಗಳ ಕಾಲ ಹಮ್ಮಿಕೊಳ್ಳಲಾಗಿರುವ ಮೊದಲ ಸುತ್ತಿನ ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮಕ್ಕೆ ಅಗತ್ಯ ಸಿದ್ಧತೆ ಕೈಗೊಳ್ಳಬೇಕು ಎಂದು ತಹಶೀಲ್ದಾರ್ ಬಿ.ಎನ್. ಗಿರೀಶ್ ಅಧಿಕಾರಿಗಳಿಗೆ ಸೂಚಿಸಿದರು.

ಪೋಲಿಯೋ ಲಸಿಕಾ ಕಾರ್ಯಕ್ರಮದ ಸಿದ್ಧತೆಗಾಗಿ ಏರ್ಪಡಿಸಲಾದ ತಾಲ್ಲೂಕು ಟಾಸ್ಕ್ ಫೋರ್ಸ್ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಯಾವುದೇ ಮಗು ಪೋಲಿಯೋ ಲಸಿಕೆಯಿಂದ ವಂಚಿತವಾಗದಂತೆ ಎಚ್ಚರ ವಹಿಸಬೇಕು. ಅಲೆಮಾರಿ ಕುಟುಂಬಗಳು, ಇಟ್ಟಿಗೆ ಭಟ್ಟಿ, ಕೊಳಚೆ ಪ್ರದೇಶ ಮುಂತಾದ ಪ್ರದೇಶಗಳಲ್ಲಿನ 5 ವರ್ಷದೊಳಗಿನ ಮಕ್ಕಳಿಗೂ ಸಹ ತಪ್ಪದೇ ಲಸಿಕೆ ಹಾಕಲು ಕಾರ್ಯತಂತ್ರ ರೂಪಿಸಬೇಕು. ಆರೋಗ್ಯ, ಶಿಕ್ಷಣ ಸೇರಿದಂತೆ ವಿವಿಧ ಇಲಾಖೆಗಳು, ಸ್ವಯಂ ಸೇವಾ ಸಂಸ್ಥೆಗಳು ಲಸಿಕಾ ಕಾರ್ಯಕ್ರಮದ ಯಶಸ್ವಿಗೆ ಸಹಕರಿಸಬೇಕು ಎಂದು ತಹಶೀಲ್ದಾರ್ ಗಿರೀಶ್ ಹೇಳಿದರು.

ತಾಲ್ಲೂಕು ಆರೋಗ್ಯಾಧಿಕಾರಿ ಡಾ. ಎಲ್.ಡಿ. ವೆಂಕಟೇಶ್ ಲಸಿಕೆ ಕಾರ್ಯಕ್ರಮದ ಕುರಿತು ಮಾಹಿತಿ ನೀಡಿ, ತಾಲ್ಲೂಕಿನಲ್ಲಿ 0-5 ವರ್ಷದೊಳಗಿನ ಮಕ್ಕಳ ಸಂಖ್ಯೆ 70375 ಇದ್ದು, ಈ ಪೈಕಿ ನಗರ-45563 ಹಾಗೂ ಗ್ರಾಮೀಣ ಪ್ರದೇಶದಲ್ಲಿ 24812 ಮಕ್ಕಳಿಗೆ ಲಸಿಕೆ ಹಾಕುವ ಗುರಿ ಇದೆ. ಲಸಿಕಾ ಕಾರ್ಯಕ್ರಮದ ಮೊದಲ ದಿನದಂದೇ ಶೇ 90 ರಷ್ಟು ಮಕ್ಕಳಿಗೆ ಲಸಿಕಾ ಕೇಂದ್ರಗಳಲ್ಲಿ ಲಸಿಕೆ ನೀಡಲಾಗುವುದು, ಉಳಿದ ಮಕ್ಕಳಿಗೆ ಮನೆ ಮನೆ ಭೇಟಿ ನೀಡಿ ನಮ್ಮ ತಂಡವು ಲಸಿಕೆ ನೀಡಲಿದೆ ಎಂದು ತಿಳಿಸಿದರು.

ತಾಲ್ಲೂಕಿನಲ್ಲಿ 423 ಲಸಿಕಾ ಕೇಂದ್ರಗಳನ್ನು ಗುರುತಿಸಲಾಗಿದೆ. ಮಕ್ಕಳಿಗೆ ಮನೆ ಮನೆ ಭೇಟಿ, ಲಸಿಕಾ ಕೇಂದ್ರಗಳು ಹಾಗೂ ಸಂಚಾರಿ ತಂಡ ಸೇರಿದಂತೆ ಒಟ್ಟು 444 ತಂಡಗಳನ್ನು ರಚಿಸಲಾಗಿದ್ದು, ಒಟ್ಟು 860 ಲಸಿಕಾಕರ್ತರು, 85 ಆರೋಗ್ಯ ಮೇಲ್ವಿಚಾರಕರು ಕ್ಷೇತ್ರದಲ್ಲಿ ಕಾರ್ಯನಿರ್ವಹಿಸಲಿದ್ದಾರೆ ಎಂದರು.

ಸಭೆಯಲ್ಲಿ ಉತ್ತರ ಮತ್ತು ದಕ್ಷಿಣ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಮಹಿಳಾ ಮತ್ತು ಮಕ್ಕಳ ಆಸ್ಪತ್ರೆ ಅಧೀಕ್ಷಕ ಡಾ. ನೀಲಕಂಠ ನಾಯಕ್, ಆರೋಗ್ಯ ಅಧಿಕಾರಿ ಡಾ. ಸುಧೀಂದ್ರ ಮತ್ತಿತರರು ಉಪಸ್ಥಿತರಿದ್ದರು.

# ರಾಜನಹಳ್ಳಿ ಶ್ರೀಗಳ ಹೋರಾಟಕ್ಕೆ ಬಿ.ಎಂ.ವಾಗೀಶ್ ಸ್ವಾಮಿ ಬೆಂಬಲ



ಬೆಂಗಳೂರು, ಫೆ.25- ನಿವೃತ್ತ ನ್ಯಾಯಮೂರ್ತಿ ನಾಗಮೋಹನ್ ದಾಸ್ ಆಯೋಗದ ವರದಿ ಅನುಷ್ಠಾನಕ್ಕೆ ಒತ್ತಾಯಿಸಿ, ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಅವರು ಫ್ರೀಡ್‌ಂ ಪಾರ್ಕ್‌ನಲ್ಲಿ ನಡೆಸುತ್ತಿರುವ ಧರಣಿ ಸತ್ಯಾಗ್ರಹದಲ್ಲಿ ದಾವಣಗೆರೆ ಜಿ.ಪಂ. ಮಾಜಿ ಸದಸ್ಯ ಹಾಗೂ ಮಾಯಕೊಂಡ ವಿಧಾನಸಭಾ ಕ್ಷೇತ್ರದ ಆಕಾಂಕ್ಷಿ ಬಿ.ಎಂ.ವಾಗೀಶ್ ಸ್ವಾಮಿ ಭಾಗವಹಿಸಿ, ಶ್ರೀಗಳ ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಿದ್ದಾರೆ. ಕಳೆದ 14 ದಿನಗಳಿಂದ ಶ್ರೀಗಳು ಸಂವಿಧಾನ ಬದ್ಧವಾದ ಬೇಡಿಕೆಗಾಗಿ ಧರಣಿ ನಡೆಸಿದ್ದು, ಸರ್ಕಾರ ಕೂಡಲೇ ಸ್ಪಂದಿಸಬೇಕೆಂದು ವಾಗೀಶ್ ಸ್ವಾಮಿ ಮನವಿ ಮಾಡಿದ್ದಾರೆ.

## ಪಿಹೆಚ್‌ಡಿ ಫೆಲೋಶಿಪ್ ಅವಧಿ ವಿಸ್ತರಣೆ

ದಾವಣಗೆರೆ, ಫೆ.25-ಪ್ರಥಮ ವರ್ಷದ ಪೂರ್ಣಾವಧಿ ಪಿಹೆಚ್‌ಡಿ ಅಧ್ಯಯನದಲ್ಲಿ ತೊಡಗಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ವ್ಯಾಸಂಗ ವೇತನ, ಫೆಲೋಶಿಪ್ ಮಂಜೂರಾತಿಗಾಗಿ ಅರ್ಜಿ ಸಲ್ಲಿಸುವ ಅವಧಿಯನ್ನು ಇದೇ ದಿನಾಂಕ 28 ರವರೆಗೆ ವಿಸ್ತರಿಸಲಾಗಿದೆ. ವಿವರಗಳಿಗಾಗಿ ಇಲಾಖಾ ವೆಬ್‌ಸೈಟ್ ಅಥವಾ ಸಹಾಯವಾಣಿ ಸಂಖ್ಯೆ 8050770004 ಸಂಪರ್ಕಿಸಬಹುದೆಂದು ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


## ಮಿಲಿಟರಿ ಕಾಲೇಜಿಗೆ ಪ್ರವೇಶ ಪರೀಕ್ಷೆ

ದಾವಣಗೆರೆ,ಫೆ.25- ಡೆಹರಾಡೂನ್‌ನಲ್ಲಿರುವ ರಾಷ್ಟ್ರೀಯ ಇಂಡಿಯನ್ ಕಾಲೇಜ್‌ನಲ್ಲಿ ಜುಲೈ 2023ನೇ ಸಾಲಿನ 8ನೇ ತರಗತಿಗೆ ಪ್ರವೇಶ ಬಯಸುವ ರಾಜ್ಯದ ಹನ್ನೊಂದುವರೆ ವರ್ಷದಿಂದ ಹದಿಮೂರು ವರ್ಷದೊಳಗಿರುವ ಬಾಲಕ, ಬಾಲಕಿಯರಿಗೆ ಅರ್ಹತಾ ಪ್ರವೇಶ ಪರೀಕ್ಷೆಯನ್ನು ಬೆಂಗಳೂರು ಕೇಂದ್ರದಲ್ಲಿ ಜೂನ್ 4 ರಂದು ನಡೆಸಲಾಗುವುದು. ಅರ್ಜಿ ಸಲ್ಲಿಸಲು ಏಪ್ರಿಲ್ 4 ಕೊನೆಯ ದಿನವಾಗಿದ್ದು. ಹೆಚ್ಚಿನ ಮಾಹಿತಿಗಾಗಿ ಬೆಂಗ ಳೂರು ನಿರ್ದೇಶನಾಲಯದ ದೂರವಾಣಿ ಸಂಖ್ಯೆ : 080-2558 9459, ಶಿವಮೊಗ್ಗ 08182-220925 ಸಂಪರ್ಕಿಸಬಹುದು ಎಂದು ಶಿವಮೊಗ್ಗ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ (ಪ್ರಭಾರ) ಉಪನಿರ್ದೇಶಕರು ತಿಳಿಸಿದ್ದಾರೆ.

## ಮತದಾರರ ಜಾಗೃತಿ ಸ್ಪರ್ಧೆಗೆ ಆಹ್ವಾನ

ದಾವಣಗೆರೆ, ಫೆ.25- ಚುನಾವಣಾ ಆಯೋಗದ ನಿರ್ದೇಶನದಂತೆ 'ನನ್ನ ಮತ ನನ್ನ ಭವಿಷ್ಯ- ಒಂದು ಮತದ ಶಕ್ತಿ' ವಿಷಯ ಕುರಿತು ರಸಪ್ರಶ್ನೆ, ಘೋಷವಾಕ್ಯ ರಚನೆ, ಗಾಯನ, ವಿಡಿಯೋ ಹಾಗೂ ಪೋಸ್ಟರ್ ವಿನ್ಯಾಸ ಮುಂತಾದ ಚಟುವಟಿಕೆಗಳುಳ್ಳ ರಾಷ್ಟ್ರೀಯ ಮತದಾರರ ಜಾಗೃತಿ ಸ್ಪರ್ಧೆ ಏರ್ಪಡಿಸಿದ್ದು ಆಸಕ್ತರು ಸ್ಪರ್ಧೆಯಲ್ಲಿ ಭಾಗವಹಿಸಬೇಕು ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಮತ್ತು ಜಿ.ಪಂ. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ. ವಿಜಯ ಮಹಾಂತೇಶ್ ಮನವಿ ಮಾಡಿದ್ದಾರೆ. ಮಾರ್ಚ್ 15 ರೊಳಗೆ ಅರ್ಜಿ ಸಲ್ಲಿಸಬಯಸುವವರು ಸ್ಪರ್ಧೆಯ ವೆಬ್‌ಸೈಟ್‌ನಲ್ಲಿ ನೋಂದಾಯಿಸಿಕೊಳ್ಳಬೇಕು.

## ವಚನ ಹಾಡಿದ ಚಿತ್ರಿಕಿ



ದಾವಣಗೆರೆ, ಫೆ.25- ನಗರದಲ್ಲಿ ಕಳೆದ ವಾರ ನಡೆದ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಸೇವಾ ದೀಕ್ಷೆ ಹಾಗೂ ಶರಣ ಚಿಂತನ ಕಾರ್ಯಕ್ರಮದಲ್ಲಿ ಚಿತ್ರಿಕಿ ಶಿವಕುಮಾರ್ ಅವರು ಶಿವಯೋಗಿ ಸಿದ್ಧರಾಮೇಶ್ವರರ ವಚನ ಹಾಡಿದರು.

# ಮನುಷ್ಯ ಹಣದಲ್ಲಿ ಶ್ರೀಮಂತ, ನೆಮ್ಮದಿಯಲ್ಲಿ ಬಡವ




ದಾವಣಗೆರೆ, ಫೆ.25- ಆಧುನಿಕ ಒತ್ತಡದ ಯುಗದಲ್ಲಿ ಮನುಷ್ಯ ಅಧ್ಯಾತ್ಮಿಕ ವಿಚಾರಗಳ ಅರಿವಿಲ್ಲದೆ ದಾರಿ ತಪ್ಪುತ್ತಿದ್ದಾನೆ. ಇದರಿಂದ ಮಾನಸಿಕವಾಗಿ, ದೈಹಿ ಕವಾಗಿ ದುರ್ಬಲಗೊಳ್ಳುತ್ತಿದ್ದಾನೆ ಎಂದು ಸಿವಿಲ್ ಇಂಜಿನಿಯರ್ - ಲೇಖಕ ಹೆಚ್.ವಿ. ಮಂಜುನಾಥ ಸ್ವಾಮಿ ಆತಂಕ ವ್ಯಕ್ತಪಡಿಸಿದರು.

ಭಾವಸಾರ ವಿಜನ್ ಇಂಡಿಯಾ ದಾವಣಗೆರೆ ಸಂಸ್ಥೆ ವತಿಯಿಂದ ನಿನ್ನೆ ಏರ್ಪಾಡಾಗಿದ್ದ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಶರವೇಗದಲ್ಲಿ ಓಡುತ್ತಿರುವ ಆಧುನಿಕ ತಂತ್ರಜ್ಞಾನದ ಯುಗದಲ್ಲಿ ತನ್ನಲ್ಲಿ ಇರುವ ನೆಮ್ಮದಿ, ಸಂತೋಷ, ತೃಪ್ತಿಯ ಬದುಕನ್ನು ಕಳೆದುಕೊಳ್ಳುತ್ತಿದ್ದಾನೆ. ಮನುಷ್ಯನಿಗೆ ಇವತ್ತಿನ ದಿನ ಧ್ಯಾನ, ಯೋಗದಂತಹ ಅಧ್ಯಾತ್ಮಿಕ ಸತ್ಸಂಗಗಳು ಬಹಳ ಅವಶ್ಯಕತೆ ಇದೆ ಎಂದು ಅವರು ತಿಳಿಸಿದರು.

ತಮ್ಮ ರಚನೆಯ ಕೃತಿ 'ಬದುಕು, ಬಯಕೆ, ಭಾವನೆ' ಯ ಕುರಿತು ಮಾತನಾಡಿದ ಮಂಜುನಾಥ ಸ್ವಾಮಿ, ಬದುಕಿನ ಮಾರ್ಮಿಕ ಸತ್ಯದ ಮಾತುಗಳಿಂದ ಮುದುಡಿದ ಮನಸ್ಸುಗಳನ್ನು ಅರಳುವಂತೆ ಮತ್ತು ಸ್ಫೂರ್ತಿದಾಯಕ ಅನೇಕ ವಿಷಯಗಳು ಈ ಕೃತಿಯಲ್ಲಡಗಿವೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಕು. ನಿಖಿತಾ ಹೆಬ್ಬಾರ್ ರಚಿಸಿದ 'ಏಕ ವ್ಯಕ್ತಿ ಚಿತ್ರ ಪ್ರದರ್ಶನ'ವನ್ನು ಏರ್ಪಡಿಸಲಾಗಿತ್ತು.

ಭಾವಸಾರ ವಿಜನ್ ಇಂಡಿಯಾ ದಾವಣಗೆರೆ ಸಂಸ್ಥೆ ಅಧ್ಯಕ್ಷ ವಿಜಯಕುಮಾರ್ ಕೆ. ಟಿಕಾರೆ, ಕಾರ್ಯದರ್ಶಿ ನರೇಂದ್ರಕುಮಾರ್ ಟಿಕಾರೆ, ವಲಯ ರಾಜ್ಯಪಾಲರಾದ ಅರುಣ ಗುಜ್ಜಾರ್, ಡಾ. ಎಂ.ಆರ್. ಜಯಪ್ರಕಾಶ್, ಮಹೇಶ್ ಶೇಂಡಿಗಿ, ವಸಂತ್ ಪ್ರಕಾಳೆ, ಶ್ರೀಮತಿ ನಾಗವೇಣಿ, ಡಾ. ಶಿಲ್ಪಾ, ಡಾ. ಹುಸ್ನಿಲಾ, ಡಾ. ಸಂದೀಪ್, ಹಿರಾಸ್ಕರ್ ಅನಿಲ್ ಮಲಾಡ್ಕರ್ ಮತ್ತಿತರರು ಉಪಸ್ಥಿತರಿದ್ದರು.

ನಿಂಗೋಜಿ ರಾವ್ ಗುಜ್ಜಾರ್ ಕಾರ್ಯಕ್ರಮವನ್ನು ನಿರೂಪಿಸಿದರು.

## ಕೌಶಲ್ಯ ತರಬೇತಿ ಅರ್ಜಿ ಆಹ್ವಾನ

ದಾವಣಗೆರೆ, ಫೆ.25- ವಿದ್ಯಾಭ್ಯಾಸವನ್ನು ನಿಲ್ಲಿಸಿರುವ 15 ರಿಂದ 45ರ ವಯೋಮಿತಿಯೊಳಗಿರುವವರಿಗೆ ಕೌಶಲ್ಯ ತರಬೇತಿ ನೀಡಲಾಗುತ್ತದೆ. ವಿವರಕ್ಕೆ ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿಗಳ ಕಚೇರಿ (89717 49636), ಡಿ.ಡಿ.ಪಿ.ಐ ಕಚೇರಿ (7892509376), ಮೋತಿ ವೀರಪ್ಪ ಸರ್ಕಾರಿ ಪದವಿ ಪೂರ್ವ ಕಾಲೇಜು (9480115378), ರಾಜನಹಳ್ಳಿ ಸೀತಮ್ಮ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಮಹಿಳಾ ಕಾಲೇಜಿ (7259661666) ನಲ್ಲಿ ಸಂಪರ್ಕಿಸಬಹುದು.



## ಚಿಕ್ಕೋಳ್ ಈಶ್ವರಪ್ಪಗೆ ರಾಷ್ಟ್ರಪ್ರಶಸ್ತಿ



ದಾವಣಗೆರೆ, ಫೆ. 25- ಹಿರೇಕೋಗಲೂರಿನ ಹಿರಿಯ ಪತ್ರಕರ್ತರೂ, ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷರೂ ಆದ ಚಿಕ್ಕೋಳ್ ಈಶ್ವರಪ್ಪ ಅವರ ಸುದೀರ್ಘ ಸೇವೆಯನ್ನು ಪರಿಗಣಿಸಿ ಬೆಂಗಳೂರಿನ ಕರ್ನಾಟಕ ಜನತಾ ಸೇನಾ ದಳದ ರಾಜ್ಯ ಸಮಿತಿಯು ಬೆಂಗಳೂರಿನ ನಯನ ಸಭಾಂಗಣ (ಕನ್ನಡ ಭವನ) ದಲ್ಲಿ ಇತ್ತೀಚಿಗೆ ನಡೆದ ಸಿದ್ಧಗಂಗಾ ಶ್ರೀ ನೆನಪು ಕಾರ್ಯಕ್ರಮ ಹಾಗೂ ಸಿದ್ಧಗಂಗಾ ಶ್ರೀ ನೆನಪು ಸ್ಮರಣ ಸಂಚಿಕೆ ಬಿಡುಗಡೆ ಸಮಾರಂಭದಲ್ಲಿ 'ಸಿದ್ಧಗಂಗಾ ಶ್ರೀ ಸದ್ಭಾವನಾ' ರಾಷ್ಟ್ರೀಯ ಪ್ರಶಸ್ತಿಯನ್ನು ಅವರಿಗೆ ಪ್ರದಾನ ಮಾಡಲಾಯಿತು.

ಬೇಲಿಮಠದ ಶ್ರೀ ಶಿವರುದ್ರ ಮಹಾಸ್ವಾಮೀಜಿ, ಡಾ. ಶ್ರೀ ಕಾಲಜ್ಞಾನ ಬ್ರಹ್ಮ ಸದ್ಗುರು ಶ್ರೀ ಶರಣ ಬಸವ ಮಹಾಸ್ವಾಮೀಜಿ, ಶ್ರೀ ಪಲ್ಲಕ್ಕಿ ನಾರಾಯಣ ಸ್ವಾಮೀಜಿ, ಡಾ.ಕೆ. ಪುತ್ತೂರಾಯರು, ನಾಡೋಜ ಡಾ. ಮನು ಬಳಿಗಾರ್, ಹೆಚ್. ಸದಾಶಿವ, ಡಾ.ಹಿರೇಮಠ್ ಅವರುಗಳು ಪ್ರಶಸ್ತಿ ಪ್ರದಾನ ಮಾಡಿ ಶುಭ ಹಾರೈಸಿದರು.

## ಕರಾಟೆಯಲ್ಲಿ ನಗರದ ಯುವಕನ ಅಂತರರಾಷ್ಟ್ರೀಯ ಮಟ್ಟದ ಸಾಧನೆ



ದಾವಣಗೆರೆ, ಫೆ. 25 - ನಗರದ ರಾಘವೇಂದ್ರ ಹೈಟೆಕ್ ಪಿಯು ಕಾಲೇಜಿನ ಶ್ರೀ ಶಾರದಾ ಮೆಡಿಕಲ್ ಅಕಾಡೆಮಿಯ ಪ್ರಥಮ ಪಿಯುಸಿ ವಿದ್ಯಾರ್ಥಿ ಪಿ. ಅಜಯ್ ಮುಂದಿನ ತಿಂಗಳು ಮಲೇಷ್ಯಾದಲ್ಲಿ ನಡೆಯುವ ಅಂತರರಾಷ್ಟ್ರೀಯ ಕರಾಟೆ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ. ಅಜಯ್, ಪ್ರಸನ್ನ ಕುಮಾರ್ - ಕವಿತಾ ದಂಪತಿ ಪುತ್ರ. ಈ ವಿದ್ಯಾರ್ಥಿಗೆ ಶ್ರೀ ಶಾರದಾ ಮೆಡಿಕಲ್ ಅಕಾಡೆಮಿಯ ಪ್ರಾಚಾರ್ಯ ಡಾ. ಅನಿಲ್ ಕುಮಾರ್ ಶ್ಯಾಗಲೆ ಅಭಿನಂದಿಸಿದ್ದಾರೆ.

# ಹಿರಿಯರು, ಯುವಕರುಗಳನ್ನೊಳಗೊಂಡ ನಮ್ಮ ತಂಡಕ್ಕೆ ಮತ ನೀಡಿ



### ಜಗಳೂರಿನ ಸಭೆಯಲ್ಲಿ ಅಧ್ಯಕ್ಷ ಸ್ಥಾನದ ಅಭ್ಯರ್ಥಿ ಇ.ಎಂ. ಮಂಜುನಾಥ ಮನವಿ

ಜಗಳೂರು, ಫೆ.25- ಹಿರಿಯರು, ಯುವಕರುಗಳನ್ನೊಳಗೊಂಡ ಸಮರ್ಥ ಅಭ್ಯರ್ಥಿಗಳಿದ್ದು, ರಾಜ್ಯ ಹಾಗೂ ಜಿಲ್ಲಾ ಪತ್ರಕರ್ತರ ಸಂಘದ ಚುನಾವಣೆಗೆ ಸ್ಪರ್ಧಿಸಿರುವ ನಮ್ಮ ತಂಡದ 25 ಅಭ್ಯಥಿಗಳಿಗೂ ಅಮೂಲ್ಯ ಮತ ನೀಡಿ ಗೆಲ್ಲಿಸಬೇಕು ಎಂದು ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಸ್ಥಾನದ ಅಭ್ಯರ್ಥಿ, 'ಜನತಾವಾಣಿ' ಉಪ ಸಂಪಾದಕ ಇ.ಎಂ. ಮಂಜುನಾಥ ಜಗಳೂರು ತಾಲ್ಲೂಕು ಪತ್ರಕರ್ತರಲ್ಲಿ ಮನವಿ ಮಾಡಿದರು.

ಪಟ್ಟಣದ ಪತ್ರಿಕಾ ಭವನದಲ್ಲಿ ರಾಜ್ಯ ಮತ್ತು ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಚುನಾವಣೆ ಅಂಗವಾಗಿ ನಡೆದ ಸಭೆಯಲ್ಲಿ ಮತ ಯಾಚಿಸಿ ಅವರು ಮಾತನಾಡಿದರು.

ಚುನಾವಣೆ ನಡೆಯುವುದು ಒಳ್ಳೆಯ ಬೆಳವಣಿಗೆ. ಎಲ್ಲಾ ತಾಲ್ಲೂಕು ಮಟ್ಟದ ಪತ್ರಕರ್ತರ ಸಮಸ್ಯೆಗಳು ಸೇರಿದಂತೆ, ಹಲವಾರು ವಿಷಯಗಳು ನಮಗೆ ತಿಳಿಯುತ್ತವೆ. ವಸತಿ, ನಿವೇಶನ, ಸರ್ಕಾರಿ ಬಸ್ ಪಾಸ್ ಸೇರಿದಂತೆ ಹಲವು ಸರ್ಕಾರದ ಸೌಲಭ್ಯಗಳನ್ನು ಒದಗಿಸಿಕೊಡಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಪತ್ರಕರ್ತರಾಗಿ ಅನೇಕ ವರ್ಷ ಸೇವೆ ಸಲ್ಲಿಸುವ ಜೊತೆಗೆ ಲಯನ್ಸ್ ಕ್ಲಬ್, ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ ಸೇರಿದಂತೆ ಹಲವು ಸಂಘಟನೆಗಳಲ್ಲೂ ಪ್ರಾಮಾಣಿಕವಾಗಿ ಸೇವೆ ಮಾಡಿದ್ದೇನೆ ಎಂದರು.

ಹಾಲಿ ಜಿಲ್ಲಾಧ್ಯಕ್ಷ ವೀರಪ್ಪ ಎಂ.ಬಾವಿ ಮಾತನಾಡಿ, ಹಿಂದೆ ಆಡಳಿತ ನಿರ್ವಹಿಸಿದ ತಂಡ ಸಮರ್ಥವಾಗಿ ಪತ್ರಕರ್ತರ ಶ್ರೇಯೋಭಿವೃದ್ಧಿಗೆ ಕೆಲಸ ನಿರ್ವಹಿಸಿದೆ. ಗುಲ್ಬರ್ಗದಲ್ಲಿ ನಡೆದ ರಾಜ್ಯ ಮಟ್ಟದ ಪತ್ರಕರ್ತರ ಸಮ್ಮೇಳನದಲ್ಲಿ ಪತ್ರಕರ್ತರಿಗೆ ಬಸ್ ಪಾಸ್ ಸೇರಿದಂತೆ, ಹಲವು ಬೇಡಿಕೆಗಳನ್ನು ಸರ್ಕಾರದ ಗಮನಕ್ಕೆ ತರಲಾಗಿದ್ದು, ಬೇಡಿಕೆಗಳನ್ನು ಈಡೇರಿಸಲು ಒಪ್ಪಿಗೆ ನೀಡಿದೆ. ಈಗಿನ ಇ.ಎಂ. ಮಂಜುನಾಥ್, ಪೇಪರ್ ಚಂದ್ರಣ್ಣ ಸೇರಿದಂತೆ ಹಿರಿಯರು, ಯುವಕರುಗಳನ್ನೊಳಗೊಂಡ ತಂಡಕ್ಕೆ ಮತ ನೀಡಿ ಗೆಲ್ಲಿಸುವಂತೆ ಮನವಿ ಮಾಡಿದರು.

ರಾಜ್ಯ ಸಮಿತಿ ಸದಸ್ಯ ಚಂದ್ರಣ್ಣ ಮಾತನಾಡಿ, ಪತ್ರಕರ್ತರ ಬಸ್‌ಪಾಸ್ ಸೇರಿದಂತೆ ಹಲವಾರು ಬೇಡಿಕೆಗಳನ್ನು ಸರ್ಕಾರಕ್ಕೆ ಗುಲ್ಬರ್ಗದಲ್ಲಿ ನಡೆದ ರಾಜ್ಯ ಮಟ್ಟದ ಸಮ್ಮೇಳನದಲ್ಲಿ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿದ್ದು, ಸರ್ಕಾರ ಒಪ್ಪಿಗೆ ನೀಡಿದೆ. ಹತ್ತು ವರ್ಷ ಸಂಘದ ಹಾಗೂ ಪತ್ರಿಕೆಗಳಲ್ಲಿ ಸೇವೆ ಮಾಡಿದವರಿಗೆ ಮೊದಲು ಆದ್ಯತೆ ನೀಡಲಾಗುವುದು ಎಂದು ಭರವಸೆ ನೀಡಿದ್ದಾರೆ. ಇಂತಹ ಅಭಿವೃದ್ಧಿಯ ಸಮರ್ಥ ತಂಡದ ಅಭ್ಯರ್ಥಿಗಳಿಗೆ ಮತ ನೀಡುವಂತೆ ಮನವಿ ಮಾಡಿದರು.

ಹಿರಿಯ ಪತ್ರಕರ್ತ ಬಾ.ಮ. ಬಸವರಾಜಯ್ಯ ಮಾತನಾಡಿ, ಪತ್ರಕರ್ತರ ಸಮಸ್ಯೆಗಳು ಬಹಳಷ್ಟು ಇವೆ. ಹಂತ ಹಂತವಾಗಿ ಬಗೆಹರಿಸಿಕೊಳ್ಳಬೇಕಿದೆ. ತಾಲ್ಲೂಕು ಮಟ್ಟದಲ್ಲೂ ಪತ್ರಕರ್ತರಿಗೆ ಕಾರ್ಯಾಗಾರಗಳನ್ನು ಮಾಡಿ, ಗ್ರಾಮೀಣ ಮಟ್ಟದ ಪತ್ರಕರ್ತರ ಸಮಸ್ಯೆಗಳನ್ನು ಇತ್ಯರ್ಥ ಮಾಡಿ ಕೊಡುವ ಭರವಸೆ ನೀಡಿದ ತಂಡದ ಸಮರ್ಥ ಜಿಲ್ಲಾಧ್ಯಕ್ಷ ಸ್ಥಾನದ ಅಭ್ಯರ್ಥಿ ಇ.ಎಂ. ಮಂಜುನಾಥ, ಚಂದ್ರಣ್ಣ ನೇತೃತ್ವದ ತಂಡಕ್ಕೆ ಮತ ನೀಡುವಂತೆ ಮನವಿ ಮಾಡಿದರು.

ಭಾರತೀಯ ಪತ್ರಕರ್ತರ ಒಕ್ಕೂಟದ ಸಮಿತಿ ಸದಸ್ಯ ಅಣಬೂರು ಮಠದ ಕೊಟ್ರೇಶ್, ಕಾರ್ಯನಿರತ ಪತ್ರಕರ್ತರ ಸಂಘದ ತಾಲ್ಲೂಕು ಅಧ್ಯಕ್ಷ ಜಿ.ಎಸ್. ಚಿದಾನಂದ, ಹಿರಿಯ ಪತ್ರಕರ್ತ ಬಿ.ಪಿ. ಸುಭಾನ್, ಡಿ.ಶ್ರೀನಿವಾಸ್ ಮಾತನಾಡಿ, ರಾಜ್ಯ ಮಟ್ಟದಲ್ಲಿ ಅವಿರೋಧವಾಗಿದ್ದು, ಜಿಲ್ಲಾ ಮಟ್ಟದಲ್ಲೂ ಅವಿರೋಧ ಆಯ್ಕೆಯಾಗಿದ್ದರೆ ಉತ್ತಮವಾಗಿತ್ತು. ಚುನಾವಣೆ ಆದರೂ ಉತ್ತಮ ಬೆಳವಣಿಗೆ. ಸಂಘದ ಪತ್ರಕರ್ತರ ಸಮಸ್ಯೆಗಳಿಗೆ ಸ್ಪಂದಿಸಿ ಕೆಲಸ ನಿರ್ವಹಿಸುವುದು ಎಲ್ಲರಿಂದಲೂ ಆಗಬೇಕಿದೆ ಎಂದರು.

### ಪತ್ರಕರ್ತರ ಸಂಘದ ಚುನಾವಣೆ

ಈ ಸಂದರ್ಭದಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸ್ಥಾನಕ್ಕೆ ಸ್ಪರ್ಧಿಸಿರುವ ಮಾಗನೂರು ಮಂಜಪ್ಪ, ಕಾರ್ಯನಿರತ ಪತ್ರಕರ್ತರ ಸಂಘದ ತಾಲ್ಲೂಕು ಅಧ್ಯಕ್ಷ ಜಿ. ಎಸ್. ಚಿದಾನಂದ, ಹಿರಿಯ ಪತ್ರಕರ್ತ ಬಿ.ಪಿ.ಸುಭಾನ್, ಡಿ. ಶ್ರೀನಿವಾಸ್, ಖಜಾಂಚಿ ಹೆಚ್.ಎಂ.ಪಿ.ಕುಮಾರ್, ಕಾರ್ಯದರ್ಶಿ ವೀರೇಶ್, ಎಸ್.ಹನುಮಂತಪ್ಪ, ಇಂದುಶೇಖರ್ ಎನ್.ಎಂ., ಎನ್.ಆರ್. ರವಿ, ಮುದ್ದಯ್ಯ, ತಾಲ್ಲೂಕು ಪ್ರಧಾನ ಕಾರ್ಯದರ್ಶಿ ಲೋಕೇಶ್, ಎಂ.ಸಿ. ಬಸವರಾಜ್, ಜೆ.ಓ. ರವಿಕುಮಾರ್, ಬಾಬು, ಮಾರುತಿ, ಮಂಜಯ್ಯ, ಜಗದೀಶ್, ರಕೀಬ್, ಸೈಯದ್ ವಾಸಿಂ, ರಾಜಪ್ಪ, ವೇದಮೂರ್ತಿ, ಸಂದೀಪ್ ಸೇರಿದಂತೆ, ತಾಲ್ಲೂಕಿನ ಪದಾಧಿಕಾರಿಗಳು ಭಾಗವಹಿಸಿದ್ದರು.

## ಯೋಗರತ್ನ ಪರಶುರಾಮಪ್ಪಗೆ 'ಸಮಾಜ ಸೇವಾಶ್ರೀ' ಪ್ರಶಸ್ತಿ



ದಾವಣಗೆರೆ, ಫೆ. 25- ನಗರದ ಎಸ್ ಎಎಸ್‌ಎಸ್ ಯೋಗ ಫೆಡರೇಷನ್ ಸಂಸ್ಥಾಪಕ ಅಧ್ಯಕ್ಷ ಯೋಗ ರತ್ನ ಎನ್. ಪರಶುರಾಮಪ್ಪ ಅವರಿಗೆ 'ಸಮಾಜ ಸೇವಾಶ್ರೀ' ಪ್ರಶಸ್ತಿ ಪ್ರದಾನ ಮಾಡಲಾಯಿತು.

ತುಮಕೂರು ತಾಲೂಕಿನ ಸುಕ್ಷೇತ್ರ ಚಿಕ್ಕತೊಟ್ಲಿಲುಕೆರೆ ಅಟವೀಶ್ವರ ಮಹಾಶಿವಯೋಗಿಗಳ ಕೃಪಾಶೀರ್ವಾದದೊಂದಿಗೆ ಶಿವಲಿಂಗೇಶ್ವರ ಮಹಾಸ್ವಾಮಿಗಳ 75ನೇ ಜನ್ಮ ದಿನದ ಪ್ರಯುಕ್ತ ಆಯೋಜಿಸಿದ್ದ ರಾಜ್ಯ ಮಟ್ಟದ ಸಮಾಜ ಸೇವಾಶ್ರೀ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಚಿಕ್ಕತೊಟ್ಲಿಲುಕೆರೆ ಬಸವ ಯೋಗಿ ಗುರೂಜಿ ಎನ್.ಪರಶುರಾಮಪ್ಪ ಅವರಿಗೆ ' ಸಮಾಜ ಸೇವಾಶ್ರೀ' ಪ್ರಶಸ್ತಿ ಪ್ರದಾನ ಮಾಡಿದರು.

ಈ ಸಂದರ್ಭದಲ್ಲಿ ನಿವೃತ್ತ ಯೋಧ ದೇವರಾಜ್, ಸರ್. ಎಂ.ವಿಶ್ವೇಶ್ವರಯ್ಯ ಅವರ ಮೊಮ್ಮಗ ಹಾಗೂ ಚಿತ್ರನಟ ಡಾ . ರಾ ಘ ವೇ ೦ ದ್ರ ಮೋಕ್ಷಗುಂಡಂ, ಪುಟ್ಟಗೌರಿ ಧಾರಾವಾಹಿ ನಟಿ ಮೀನಾಕ್ಷಿ ಸೇರಿದಂತೆ ಇನ್ನಿತರರಿದ್ದರು.

## 'ಜಲಸಿರಿಯ ಸೊಬಗು' ಕೃತಿ ಬಿಡುಗಡೆ

ಕನ್ನಡ ಸಾಹಿತ್ಯ ಲೋಕವಿಂದು ಸಮೃದ್ಧವಾಗಿ ಬೆಳೆಯುತ್ತಿರುವುದು ಕನ್ನಡಿಗರ ಓದುವ ಮತ್ತು ಬರೆಯುವ ಅಭಿಲಾಷೆಯಿಂದ ಸಾಧ್ಯವಾಗಿದೆ. ದಿನದಲ್ಲಿ ನೂರಾರು ಕೃತಿಗಳು ಲೋಕಾರ್ಪಣೆ ಆಗುತ್ತಿರುವುದು ಅದಕ್ಕೆ ಸಾಕ್ಷಿ.

ನಮ್ಮನಡುವಿನ ಸ್ನೇಹಮಯಿ ಲೇಖಕಿ ಶ್ರೀಮತಿ ಟಿ. ಎಸ್.ಶೈಲಜಾ ಅವರು ವಿಶೇಷವಾಗಿ ಜಲಪಾತದ ಸೊಬಗನ್ನು ತಮ್ಮ ಕೃತಿ 'ಜಲಸಿರಿಯ ಸೊಬಗು' ಜಲಪಾತಗಳ ಸುತ್ತ ಒಂದು ನೋಟ. ಈ ಕೃತಿಯನ್ನು ಇಂದು ಕುವೆಂಪು ಕನ್ನಡ ಭವನದಲ್ಲಿ ಗಿರಿಶೈಲಾ ಪ್ರಕಾಶನ ಮತ್ತು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ದಾವಣಗೆರೆ ಇವರ ಸಂಯುಕ್ತ ಆಶ್ರಯದಲ್ಲಿ ಬಿಡುಗಡೆ ಮಾಡಲಿದ್ದಾರೆ.

ಪ್ರಕೃತಿ ಮತ್ತು ಪ್ರವಾಸ ಪ್ರಿಯರಾದ ಇವರು, ದಾವಣಗೆರೆ ಜಿಲ್ಲೆಯ ಹಿರಿಯ ಸಾಹಿತಿಯಾಗಿದ್ದ ದಿ. ಟಿ. ಗಿರಿಜಾ ಅವರ ಸೋದರ ಸೊಸೆ. ಇವರು ತಾವು ಕಂಡ ಕರ್ನಾಟಕ ರಾಜ್ಯದ ಹಲವಾರು ಜಲಪಾತಗಳ ಬಗ್ಗೆ ಇಲ್ಲಿ ಜಲಪಾತಗಳ ಸೊಬಗಿನ ಚಿತ್ರಗಳ ಜೊತೆಗೆ ದಾಖಲಿಸಿದ್ದಾರೆ.

ಸುಮಾರು 25 ಜಿಲ್ಲೆಗಳಲ್ಲಿ ತಾವು ಕಂಡ ಜಲಪಾತಗಳ ಸೊಬಗನ್ನು ತುಂಬಾ ಸರಳವಾಗಿ, ಮನ ಮುಟ್ಟುವಂತೆ ನಿರೂಪಿಸಿದ್ದಾರೆ. ಜಲಪಾತಗಳ ಹೆಸರುಗಳೂ ಸಹ ತುಂಬಾ ಆಕರ್ಷಕವಾಗಿವೆ.

ಈಗಾಗಲೇ, ಪ್ರವಾಸಕ್ಕೊಂದು ಕೈಪಿಡಿ ಮತ್ತು ಟಿ. ಗಿರಿಜಾ ಅವರ 'ದಾವಣಗೆರೆ ಇದು ನಮ್ಮ ಜಿಲ್ಲೆ'ಯ ಕೃತಿಯನ್ನು ಪರಿಷ್ಕೃತ ಮಾಡಿದ್ದಾರೆ. ಇವರ ಈ ಕೃತಿಯೂ ಸಹ ಪ್ರವಾಸ ಪ್ರಿಯರಿಗೆ ಒಳ್ಳೆಯ ಕೈಪಿಡಿ ಆಗಲಿದೆ.

ಈ ಕೃತಿಯ ಬಿಡುಗಡೆಯ ಕಾರ್ಯಕ್ರಮವನ್ನು ಇಂದು ಸಂಜೆ 5 ಕ್ಕೆ ಕುವೆಂಪು ಕನ್ನಡ ಭವನದಲ್ಲಿ ಮಾಜಿ ಮಹಾಪೌರ ಎಸ್.ಟಿ. ವೀರೇಶ್ ಉದ್ಘಾಟಿಸಲಿದ್ದು, ಪುಸ್ತಕ ಬಿಡುಗಡೆಯನ್ನು ಚಿತ್ರದುರ್ಗ ಜಿಲ್ಲೆಯ ಹಿರಿಯ ಸಾಹಿತಿ ಡಾ. ತಾರಿಣಿ ಶುಭದಾಯಿನಿ ಅವರು ನಡೆಸಿ ಕೊಡಲಿದ್ದಾರೆ.

ಜಾನಪದ ಚಿಂತಕರೂ, ನಿವೃತ್ತ ಪ್ರಾಧ್ಯಾಪಕರೂ ಆದ ಡಾ. ಮಲ್ಲಿಕಾರ್ಜುನ ಕಲಮರಹಳ್ಳಿ ಅವರು ಕೃತಿಯ ಕುರಿತು ಮಾತನಾಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಜಾನಪದ ತಜ್ಞ ಡಾ. ಎಂ.ಜಿ.ಈಶ್ವರಪ್ಪ, ಆಗಮಿಸಲಿದ್ದಾರೆ. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ.ವಾಮದೇವಪ್ಪ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.



-ಶ್ರೀಮತಿ ವೀಣಾ ಕೃಷ್ಣಮೂರ್ತಿ

## ಎಂ.ಬಿ.ಎ ಕೋರ್ಸ್‌ನ ಖಾಲಿ ಸೀಟುಗಳಿಗೆ ಅರ್ಜಿ

ದಾವಣಗೆರೆ, ಫೆ.25 - ದಾವಣಗೆರೆ ವಿಶ್ವವಿದ್ಯಾನಿಲಯದ 2021-22ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ಆಡಳಿತ ನಿರ್ವಹಣಾಶಾಸ್ತ್ರ ಅಧ್ಯಯನ ವಿಭಾಗಗಳಲ್ಲಿ ಖಾಲಿ ಇರುವ ಸೀಟುಗಳನ್ನು ಭರ್ತಿ ಮಾಡುವ ಸಂಬಂಧ ಅರ್ಹ ವಿದ್ಯಾರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ ಎಂದು ದಾವಣಗೆರೆ ವಿಶ್ವವಿದ್ಯಾನಿಲಯದ ಕುಲಸಚಿವರು ತಿಳಿಸಿದ್ದಾರೆ.

ಅರ್ಜಿ ಸಲ್ಲಿಸುವಿಕೆ, ಪ್ರವೇಶ ಪರೀಕ್ಷೆ ದಿನಾಂಕ ಹಾಗೂ ಇತರೆ ಪೂರಕ ಮಾಹಿತಿಗಳನ್ನು ವಿಶ್ವವಿದ್ಯಾನಿಲಯದ ವೆಬ್‌ಸೈಟ್ http://davangereuniversity.ac.in ನಲ್ಲಿ ಪ್ರಕಟಿಸಲಾಗಿದೆ. ಎಂ.ಬಿ.ಎ. ಕೋರ್ಸಿನ ಪ್ರವೇಶಾತಿಗೆ ಸಂಬಂಧಿಸಿದಂತಹ ಮಾಹಿತಿಯನ್ನು ವಿಶ್ವವಿದ್ಯಾನಿಲಯವು ಆಗಾಗ್ಗೆ ವೆಬ್‌ಸೈಟ್‌ನಲ್ಲಿ ಪ್ರಕಟಿಸುತ್ತದೆ ಎಂದು ಕುಲಸಚಿವರು ತಿಳಿಸಿದ್ದಾರೆ.


**ಬೇಕಾಗಿದ್ದಾರೆ**
ಗುಡ್ ಫುಡ್ ರೆಸ್ಟೋರೆಂಟ್‌ನಲ್ಲಿ ಕ್ಲೀನಿಂಗ್ ಕೆಲಸಕ್ಕೆ ಹೆಣ್ಣುಮಕ್ಕಳು ಹಾಗೂ ದೋಸೆ ಭಟ್ಟರು ಬೇಕಾಗಿದ್ದಾರೆ. ಆಸಕ್ತರು ಸಂಪರ್ಕಿಸಿ :
ಮೊ. 99000-04555

**ಮನೆಗಳು ಮಾರಾಟಕ್ಕಿವೆ**
ಬಸವೇಶ್ವರ ಲೇಔಟ್ ಪೂರ್ವ 30x40, ಕೆಳಗೆ 2BHK ಮೇಲೆ single Attach ರೂಂ, ಉತ್ತರ 30x36 ಡ್ಯೂಪ್ಲೆಕ್ಸ್, ನಿಜಲಿಂಗಪ್ಪ ಬಡಾವಣೆ ಉತ್ತರ 30x40 Single Room ಡ್ಯೂಪ್ಲೆಕ್ಸ್
ಐಗೂರು ವಿಜಯಕುಮಾರ್
99457 02495

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳು ಬೇಕಾಗಿದ್ದಾರೆ. ಗ್ರಾಮಾಂತರ ಪ್ರದೇಶದ ಪುರುಷ ಅಭ್ಯರ್ಥಿಗಳಿಗೆ ಊಟ, ವಸತಿ ಸೌಲಭ್ಯವಿದೆ.
ಸಂಪರ್ಕಿಸಿ : 98442-94446

**ಮನೆ ಬಾಡಿಗೆಗೆ, ಲೀಸ್‌ಗೆ ಇದೆಯೇ ?**
(No brokage)
ನಿಮ್ಮ ಮನೆ ಬಾಡಿಗೆಗೆ, ಲೀಸ್‌ಗೆ ಇದೆಯೇ ? ನಮಗೆ ಹೇಳಿ, ನಾವು ಯಾವುದೇ ಕಮೀಷನ್ ಇಲ್ಲದೇ ಕೊಡಿಸುತ್ತೇವೆ.
ಕಿರಣ್ ಬೂಸ್ನೂರ್ : 9844063409
(ಮನೆ ಬಾಡಿಗೆ, ಲೀಸ್‌ಗೆ, ಕೊಳ್ಳುವವರಿಗೆ ಅನ್ವಯಿಸುವುದಿಲ್ಲ *)

**ಸೈಟು, ಮನೆ ಖರೀದಿಗೆ ಬೇಕಾಗಿದೆ**
ಕೇವಲ ($^1/_2$%) ಅರ್ಧ ಪರ್ಸೆಂಟ್ ಕಮೀಷನ್‌ಗೆ ನಾವು ನಿಮ್ಮ ಸೈಟು, ಮನೆ ಮಾರಿಸಿಕೊಡುತ್ತೇವೆ.
ಕಿರಣ್ ಬೂಸ್ನೂರ್ : 98440 63409
(ಸೈಟು, ಮನೆ ಮಾರುವವರಿಗೆ ಮಾತ್ರ ಅನ್ವಯಿಸುತ್ತದೆ, ಕೊಳ್ಳುವವರಿಗಲ್ಲ*)

**ತಕ್ಷಣ ಬೇಕಾಗಿದ್ದಾರೆ**
ಹಾಸ್ಟೆಲ್‌ನಲ್ಲಿ ಕೆಲಸ ಮಾಡಲು ಅನುಭವವಿರುವ ಇಬ್ಬರು ಮಹಿಳಾ ಹೆಲ್ಪರ್ ಬೇಕಾಗಿದ್ದಾರೆ.
98457 75768
88846 75884

**ಮನೆಗಳು ಮಾರಾಟಕ್ಕಿವೆ**
ಶಿವ ಪಾರ್ವತಿ ಪೂರ್ವ 30x52 ಡ್ಯೂಪ್ಲೆಕ್ಸ್, ಉತ್ತರ 30x46. ಕೆಳಗೆ 2BHK ಮೇಲೆ 1BHK J.H Patel ಬಡಾವಣೆ ಉತ್ತರ 30x50 ಡ್ಯೂಪ್ಲೆಕ್ಸ್, 30x40 2BHK, ಪೂರ್ವ 20X30
ಐಗೂರು ವಿಜಯಕುಮಾರ್
99457 02495

**HOUSE FOR RENT**
1st Floor, 2BHK West Face. Door No. 2491, MCC 'A' Block, 9th Cross.
Contact :
Mr David, 9448233494

**ಮನೆಯ ಪೇಂಟಿಂಗ್**
ಹೊಸ ಮತ್ತು ಹಳೆ ಮನೆಗಳಿಗೆ. ಆಫೀಸ್, ಕಮರ್ಷಿಯಲ್ ಬಿಲ್ಡಿಂಗ್ ಫ್ಯಾಕ್ಟರಿ, ಗೋಡೌನ್‌ಗಳಿಗೆ ಕಡಿಮೆ ಖರ್ಚಿನಲ್ಲಿ ಗುಣಮಟ್ಟದ ಪೇಂಟಿಂಗ್ ಮಾಡಿಕೊಡಲಾಗುವುದು.
Mob: 95913 10082

**ಮತ್ಸ್ಯದ ಮನೆ**
ಮನೆಯಲ್ಲಿಯೇ ತಯಾರಿಸಿದ ಸಮುದ್ರದ ಮೀನಿನ ಆಹಾರಕ್ಕಾಗಿ ಸಂಪರ್ಕಿಸಿ
95133 14666
(ಹೋಂ ಡೆಲಿವರಿ ಮಾತ್ರ)

**ಮನೆ ಬಾಡಿಗೆಗೆ ಇದೆ**
#63, 1st Main, 1st Cross, ನಿಜಲಿಂಗಪ್ಪ ಲೇ ಔಟ್, ದಾವಣಗೆರೆ. ಸಸ್ಯಹಾರಿಗಳು ಮಾತ್ರ.
98455 67223
98808 27928

**ಮನೆ ಬಾಡಿಗೆಗೆ ಇದೆ**
ಸ್ವಾಮಿ ವಿವೇಕಾನಂದ ಬಡಾವಣೆ 1ನೇ ಮೇನ್,2ನೇ ಕ್ರಾಸ್‌ನಲ್ಲಿರುವ ಪುಷ್ಪ ಮಹಾಲಿಂಗಪ್ಪ ಸ್ಕೂಲ್, ಕಾಲೇಜ್ ಹಿಂಭಾಗ ಬಾಪೂಜಿ ಇಂಜಿನಿಯರಿಂಗ್, ಡಿಪ್ಲೋಮಾ ಕಾಲೇಜ್ ಹತ್ತಿರವಿರುವ, ಕುಡಿಯುವ ನೀರು ಮತ್ತು ಬೋರ್‌ವೆಲ್ ಸೌಕರ್ಯವುಳ್ಳ 2 ಬೆಡ್‌ರೂಂ ಮನೆ ಬಾಡಿಗೆಗೆ ಇದೆ. ಆಸಕ್ತರು ಸಂಪರ್ಕಿಸಿ
99807 27419, 74110 77419

**ಸೈಟ್‌ಗಳು ಮಾರಾಟಕ್ಕಿವೆ**
ದಾವಣಗೆರೆ ರಾಮನಗರ, ಎಸ್.ಎಸ್. ಆಸ್ಪತ್ರೆ ಹಿಂಭಾಗದಲ್ಲಿ ಸುಲಭ ಕಂತುಗಳಲ್ಲಿ ಸೈಟುಗಳು ಮಾರಾಟಕ್ಕಿವೆ. (Rs 1,450/-Sqft)
ಹುಲ್ಲುಮನೆ ಪ್ರಾಪರ್ಟೀಸ್ & ಪವರ್ ಲಿಮಿಟೆಡ್
95135 03000
97392 15000

**ಬೇಕಾಗಿದ್ದಾರೆ**
ಹೋಟೆಲ್ ಉದ್ಯಮಕ್ಕೆ ಕೆಲಸಗಾರರು ಬೇಕಾಗಿದ್ದಾರೆ.
94487 51313

**ಹೋಟೆಲ್ /ಮನೆ ಬಿಲ್ಡಿಂಗ್ ಮಾರಾಟಕ್ಕಿದೆ**
ಪಿ.ಬಿ. ರಸ್ತೆ, ಜಿಎಂಐಟಿ ಕಾಲೇಜು ಮುಂದೆ 22 ಅಗಲ 100 ಅಡ್ಡಿ ಉದ್ದ ದಕ್ಷಿಣ ದಿಕ್ಕಿರುವ ಹೋಟೆಲ್ ಮತ್ತು 2 ಬೆಡ್‌ರೂಂ ಮನೆ, 3 ಎಕ್ಸ್‌ಟ್ರಾ ರೂಮ್ ಇರುವ ಬಿಲ್ಡಿಂಗ್ ಮಾರಾಟಕ್ಕಿದೆ.
ಸಂಪರ್ಕಿಸಿ: 90085 25785

**ಬೇಕಾಗಿದ್ದಾರೆ**
ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ.
ಅಮರಾವತಿ ಹಾಲಪ್ಪ
98454 84076

**Required**
Boys / Ladies hostel warden, Telecalling only for ladies (experience in institution), reception also.
Location:- Davangere
87628 67557

**ಇಂಡಸ್ಟ್ರೀಯಲ್ ಸೈಟುಗಳು ಮಾರಾಟಕ್ಕಿವೆ**
ದಾವಣಗೆರೆ ನಗರದ ಬಂಬೂ ಬಜಾರ ಪಕ್ಕದ ಬಸಾಪುರ ರಸ್ತೆಯಲ್ಲಿ 50x150 ಅಡಿ ಅಳತೆಯ ಸೈಟುಗಳು ಮಾರಾಟಕ್ಕಿವೆ.
98441 88191

**ಸಂಪರ್ಕಿಸಿರಿ**
ಯಾವುದಾದರೂ ಕಾರ್ಪೆಂಟರ್ ಕೆಲಸವಿದ್ದರೆ ಸಂಪರ್ಕಿಸಿ.
70229 52782

**WANTED**
BILLING/STORE SALES
BOLAS THE FACTORY OUTLET
DRY FRUIT SHOP
FOR LADIES ONLY
QUALIFICATION : ANY DEGREE WITH COMPUTER KNOWLEDGE
99007 08999 / 94484 54709

**Only Lingayath Marriage LINK'S**
(New / Second)
Contact through Whatsapp
98861 70600

**ಬೇಕಾಗಿದ್ದಾರೆ**
ಪೈಪ್ ಡಿಸ್ಟ್ರಿಬ್ಯೂಷನ್‌ನಲ್ಲಿ ಕೆಲಸ ಮಾಡಲು ಅನುಭವವುಳ್ಳ Sales Executive ಬೇಕಾಗಿದ್ದಾರೆ. ದ್ವಿಚಕ್ರ ವಾಹನ ಉಳ್ಳವರು ಮಾತ್ರ ಸಂಪರ್ಕಿಸಿ.
74063 96332
74067 40635

**ಮನೆ ಬಾಡಿಗೆಗೆ**
**Lease or Rent**
(ಸಸ್ಯಹಾರಿಗಳಿಗೆ ಮಾತ್ರ) 2 ಬೆಡ್ ರೂಂ, 1 ನೇ ಮಹಡಿ, ಆಲೂರು ಆಸ್ಪತ್ರೆ ಎದುರು, ಎವಿಕೆ ಕಾಲೇಜು ರಸ್ತೆ, ದಾವಣಗೆರೆ
9986173736

**REQUIRED**
A Liberty Showroom requires Sales Executive Qualification- PUC / Degree. Liberty Showroom Opp. SS Mall, Shamanur Road, Davanagere.
76761 54314

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು / ಹುಡುಗಿಯರು Part time & Full time ಬೇಕಾಗಿದ್ದಾರೆ.
Show off NX #
4 & 5 Sri Murugarajendra Complex Hadadi Road, Opp Croma, KEB Circle. DVG
08192 231527

**ಮನೆ ಬಾಡಿಗೆಗೆ ಇದೆ**
ಡೋರ್ ನಂ. 3367/4(a) ಶಾಮನೂರು ರಸ್ತೆ, ಲಕ್ಷ್ಮಿ ಫ್ಲೋರ್ ಮಿಲ್ ಹತ್ತಿರ, ಪೆಟ್ರೋಲ್ ಬಂಕ್ ಎದುರು. Ground Floor 2 ಬೆಡ್ ರೂಮ್ ಮನೆ, ಕಾರ್ ಪಾರ್ಕಿಂಗ್ ಇದೆ ಮತ್ತು ಎರಡನೇ ಮಹಡಿಯಲ್ಲಿ ಅಟ್ಯಾಚ್ ಬಾತ್ ರೂಮ್ ಇರುವ ರೂಮ್ ಸಹ ಬಾಡಿಗೆಗೆ ಇದೆ.
94487 58967

**WANTED**
Machine Operate ಮಾಡಲು ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ.
8711063041

**ಮನೆಯ ವಾಸ್ತು ಸಮಸ್ಯೆಗಳಿಗೆ ಸುಲಭ ಪರಿಹಾರಗಳು**
ಉತ್ತರಾಭಿಮುಖವಾಗಿ ದೀಪ ಹಚ್ಚಿದರೆ ಧನ ಧಾನ್ಯ ಲಾಭ.(T&C) ಸಂಪರ್ಕಿಸಿ. ಕಲ್ಪತರು ಕನಸ್ಟ್ರಕ್ಷನ್ಸ್ ದಾವಣಗೆರೆ.
98455 83340

**ಬೇಕಾಗಿದ್ದಾರೆ**
SSLC ಯಿಂದ ಯಾವುದೇ ಪದವಿ ಹೊಂದಿದ ಮಹಿಳೆಯರು ಕೆಲಸಕ್ಕೆ ಬೇಕಾಗಿದ್ದಾರೆ. ಟೆಲಿಕಾಲರ್, ಸಹಾಯಕಿಯರು, ಮಹಿಳೆಯರು ಬೇಕಾಗಿದ್ದಾರೆ.
ಪಾರ್ಟ್ ಟೈಂ ಕೆಲಸ
ಫೋ. : 88614 38237

**ಬೇಕಾಗಿದ್ದಾರೆ**
Two Wheeler Spares ಅನುಭವವುಳ್ಳ ಆಟೋಮೊಬೈಲ್ ಶಾಪ್‌ನಲ್ಲಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
74117 79912 /81529 46270

**ಮನೆ ಮಾರಾಟಕ್ಕಿದೆ**
20x30 ಅಳತೆಯ ಪೂರ್ವ ದಿಕ್ಕಿನ Final Approved Ground and First Floor ಮನೆ ಮಾರಾಟಕ್ಕಿದೆ. Near Bagirathi Circle, Davanagere.
87470 61217

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ, ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಟೆರೇಸ್, ಬಾಲ್ಕನಿ, ಸಂಪು, ಗೋಡೆ ಬಿರುಕು, ನೀರಿನ ಟ್ಯಾಂಕ್ ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿರಿ :
80955 09025
ಕೆಲಸ : 100% ಗ್ಯಾರಂಟಿ

**ಕಂತಿನ ಸೌಲಭ್ಯ**
ನಮ್ಮಲ್ಲಿ ಎಲ್ಲಾ ತರಹದ ಸೋಫಾ, ಸ್ಪಾಂಜ್ ಬೆಡ್, ಕುಷನ್, ಸೋಫೆಮೆಸ್, ಪಾಲಿಶ್ ಮಾಡುತ್ತೇವೆ. ರಿಪೇರಿ ಸಹ ಮಾಡುತ್ತೇವೆ.
ಎಕ್ಸ್‌ಚೇಂಜ್ ಆಫರ್
81529 29298, 78923 28599

**ಬಾಡಿಗೆಗಿದೆ**
ಪಿ.ಜೆ. ಎಕ್ಸ್‌ಟೆನ್ಷನ್‌ನಲ್ಲಿ ನರ್ಸಿಂಗ್ ಹೋಮ್‌ಗೆ ಸೂಕ್ತವಾದ 70x40 ಜಾಗ ಬಾಡಿಗೆಗಿದೆ. ಬಾಪೂಜಿ ಆಸ್ಪತ್ರೆ ಹತ್ತಿರ, G + 1 Floor
ಆಸಕ್ತರು ಸಂಪರ್ಕಿಸಿ :
98862 62739, 63619 17504

**ಸೈಟು ಮಾರಾಟಕ್ಕಿದೆ**
ದಾವಣಗೆರೆ MCC 'B' Block, 12 ನೇ ಮುಖ್ಯ ರಸ್ತೆ, ಸರ್ಕಾರಿ ನಿವೃತ್ತ ನೌಕರರ ಭವನದ ಹತ್ತಿರ, 47x120 ಅಳತೆ, ಒಟ್ಟು 8400 ಅಡಿ ಸೈಟ್ ಮಾರಾಟಕ್ಕಿದೆ.
94483 53127

**ANARGYA ASSOCIATES**
BUILDING Planings 3D Desgins and Material Contractor, competative Price.
95351 11990

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**MBA Marketing**
& HR Rs.25,000/-PM SALARY Based On PERFORMANCE. Fresher and Experienced can send Resume to
94487 29058

**ಸಾರ್ವಜನಿಕ ಪ್ರಕಟಣೆಗಾಗಿ**
ಶ್ರೀಮತಿ ಹುಲಿಗೆಮ್ಮ ಗಂಡ ಹುಲಿಗೆಪ್ಪ, ಆದ ನಾನು ಸಾರ್ವಜನಿಕರಲ್ಲಿ ಕೇಳಿಕೊಳ್ಳುವುದೇನೆಂದರೆ, ಹರಪನಹಳ್ಳಿ ತಾಲ್ಲೂಕು, ಅರಸೀಕೆರೆ ಹೋಬಳಿ, ಗಡಿಗುಡಾಳ್ ಗ್ರಾಮದಲ್ಲಿ ನನ್ನ ಹೆಸರಿನಲ್ಲಿರುವ ಸರ್ವೇ ನಂಬರ್ 639/A ಜಮೀನಿಗೆ ಸಂಬಂಧಿಸಿದ ಈ ಕೆಳಕಂಡ ಮೂಲ ದಾಖಲೆಗಳನ್ನು ಕಳೆದುಕೊಂಡಿದ್ದೇನೆ.
1. ಮಹೇಶ್ವರಗೌಡ ಇವರ ಹೆಸರಿನಲ್ಲಿರುವ ನೋಂದಾಯಿತ ಕ್ರಯಪತ್ರ ದಿನಾಂಕ 20.03.2002 (SR No. 2294/2001-2002)
2. ಸುನಂದಮ್ಮ ಗಂಡ ಹನುಮಂತಪ್ಪ ಇವರ ಹೆಸರಿನಲ್ಲಿರುವ ನೋಂದಾಯಿತ ಕ್ರಯ ಪತ್ರ ದಿನಾಂಕ 17.07.2012 (CD No. HRPD45, 1308/2012-13)
3. ಎ. ಸತ್ಯನಾರಾಯಣ ಇವರ ಹೆಸರಿನಲ್ಲಿರುವ ನೋಂದಾಯಿತ ಜನರಲ್ ಪವರ್ ಆಫ್ ಅಟಾರ್ನಿ ದಿನಾಂಕ 03.05.2016 (6/2016-17, CD NO. HRPD88)
4. ಎಂ. ತಿಮ್ಮಣ್ಣ ಇವರ ಹೆಸರಿನಲ್ಲಿರುವ ನೋಂದಾಯಿತ ಕ್ರಯದ ಕರಾರು ಪತ್ರದ ದಿನಾಂಕ 03.05.2016 (580/2016-17)
5. ಎಂ. ತಿಮ್ಮಣ್ಣ ಇವರ ಹೆಸರಿನಲ್ಲಿರುವ ನೋಂದಾಯಿತ ಕ್ರಯದ ಕರಾರು ಪತ್ರದ ರದ್ಧತಿ ಪತ್ರ, ದಿನಾಂಕ : 01.12.2016 (4526/2016-17)
ಈ ದಾಖಲೆಗಳು ಯಾರಿಗಾದರೂ ಸಿಕ್ಕಲ್ಲಿ, ಈ ಕೆಳಕಂಡ ವಿಳಾಸಕ್ಕೆ ತಲುಪಿಸಬೇಕಾಗಿ ವಿನಂತಿ.
ವಿಳಾಸ : ಹುಲಿಗೆಮ್ಮ ಗಂಡ ಹುಲಿಗೆಪ್ಪ, ವಾಸ : # 852/1, ಮಲ್ಲಿಕಾರ್ಜುನ ದೇವಸ್ಥಾನದ ಎದುರು, ನ್ಯೂ ಬಂಬೂ ಬಜಾರ್, ದಾವಣಗೆರೆ. ದಾವಣಗೆರೆ ತಾಲ್ಲೂಕು, ದಾವಣಗೆರೆ ಜಿಲ್ಲೆ.
ದಿನಾಂಕ : 23.02.2022, ಸ್ಥಳ : ದಾವಣಗೆರೆ.
ಮೊಬೈಲ್ : 94485-66523

**ಸಾರ್ವಜನಿಕ ಪ್ರಕಟಣೆಗಾಗಿ**
ಶ್ರೀ ಎ. ಸತ್ಯನಾರಾಯಣ ತಂದೆ ಸೂರ್ಯನಾರಾಯಣ, ಆದ ನಾನು ಸಾರ್ವಜನಿಕರಲ್ಲಿ ಕೇಳಿಕೊಳ್ಳುವುದೇನೆಂದರೆ ಹರಪನಹಳ್ಳಿ ತಾಲ್ಲೂಕು, ಅರಸೀಕೆರೆ ಹೋಬಳಿ, ಗಡಿಗುಡಾಳ್ ಗ್ರಾಮದಲ್ಲಿ ನನ್ನ ಹೆಸರಿನಲ್ಲಿರುವ ಸರ್ವೆ ನಂಬರ್ 639/B ಜಮೀನಿಗೆ ಸಂಬಂಧಿಸಿದ ಈ ಕೆಳಕಂಡ ಮೂಲ ದಾಖಲೆಗಳನ್ನು ಕಳೆದುಕೊಂಡಿದ್ದೇನೆ.
1. ಮಹೇಶ್ವರಗೌಡ ಇವರ ಹೆಸರಿನಲ್ಲಿರುವ ಮ್ಯುಟೇಷನ್ ನಂ. M 13/93-94
2. ಎಸ್.ಕೆ. ಹನುಮಂತಪ್ಪ ಇವರ ಹೆಸರಿನಲ್ಲಿರುವ ನೋಂದಾಯಿತ ಕ್ರಯ ಪತ್ರ ದಿನಾಂಕ : 30.11.2010 (CD NO. HRPD 35, 1796/2010-11)
3. ಎ. ಸತ್ಯನಾರಾಯಣ ಇವರ ಹಸೆರಿನಲ್ಲಿರುವ ನೋಂದಾಯಿತ ಜನರಲ್ ಪವರ್ ಆಫ್ ಅಟಾರ್ನಿ ದಿನಾಂಕ : 03.05.2016 (7/2016-17, CD. NO. HRPD 88)
4. ಎಂ. ತಿಮ್ಮಣ್ಣ ಇವರ ಹೆಸರಿನಲ್ಲಿರುವ ನೋಂದಾಯಿತ ಕ್ರಯದ ಕರಾರು ಪತ್ರ ದಿನಾಂಕ : 03.05.2016 (581/2016-17, CD NO. HRPD88)
ಈ ದಾಖಲೆಗಳು ಯಾರಿಗಾದರೂ ಸಿಕ್ಕಲ್ಲಿ, ಈ ಕೆಳಕಂಡ ವಿಳಾಸಕ್ಕೆ ತಲುಪಿಸಬೇಕಾಗಿ ವಿನಂತಿ.
ವಿಳಾಸ : ಎ. ಸತ್ಯನಾರಾಯಣ ತಂದೆ ಸೂರ್ಯನಾರಾಯಣ, ವ್ಯವಸಾಯ, ವಾಸ ಶ್ರೀನಿವಾಸನಗರ ಕ್ಯಾಂಪ್, ಮಲ್ಲನಾಯ್ಕನಹಳ್ಳಿ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ.
ದಿನಾಂಕ : 23.02.2022, ಸ್ಥಳ : ದಾವಣಗೆರೆ.
ಮೊಬೈಲ್ : 94800-65665, 94485-66523

**PR ಹೋಂ ನರ್ಸಿಂಗ್**
KTJ Nagar, 2nd Main, 5th Cross, Davangere. Ph. : 97415 62814
NAGARATHNAMMA B.M.
Reg. Staff Nurse, Davangere.
IVIM Injection, IVF Fluid at Home, Blood Drawing for Investigtion, Bed Bath for Bedridden Patient & Report Issue at Bapuji Hospital, Physiotherapy for Paralysis Patient, All with Doctor's Prescription Only, All Reports at Bapuji Hospital
Every Sunday Free Consultancy- Time : 10.00 am to 10 Pm

**WANTED**
Service Works Manager
- Excellent Interpersonal & communication skills.
- Superior product knowledge.
- A team player with leadership skills.
- Maintain a positive attitude focused on customer satisfaction.
- Preferable Qualification - Automobile
(Male Candidates Only)
Age Limit : Below 45
Note: Experience Candidates Only
Good Salary (ESI,PF + Incentive)
SRINIVASA HONDA
Ph No : 9844298506

**ನವರ್ಣ ತಂತ್ರ ಶಕ್ತಿ**
ಜ್ಯೋತಿಷ್ಯ /ಸಂಖ್ಯಾ /ವಾಸ್ತು /ಹಸ್ತ ಶಾಸ್ತ್ರ ಸ್ತ್ರೀ-ಪುರುಷ ವಶೀಕರಣ, ಗಂಡ - ಹೆಂಡತಿ ಕಿರಿಕಿರಿ ಇದ್ದರೆ ವಶೀಕರಣ ಯಂತ್ರ/ಮಂತ್ರ/ ತಂತ್ರ & 11 ತರಹ ವಿದ್ಯೆಯನ್ನು ಹೇಳಿಕೊಡಲಾಗುವುದು & ಪರಿಹಾರ ಶತಃ ಸಿದ್ಧ.
97409 55345

**ರಕ್ತ ದಾನ ಶ್ರೇಷ್ಠ ದಾನ**

**ಮಿಯಾಖಾನ್ ಬೆಂಗಾಳಿ**
ಎಲ್ಲ ಸಮಸ್ಯೆಗಳಿಗೆ ಗ್ಯಾರಂಟಿ ಪರಿಹಾರ.
ವಶೀಕರಣ ಸ್ಪೆಷಲಿಸ್ಟ್, ನಿಮ್ಮ ಸಮಸ್ಯೆಗಳಾದ ಆಸ್ತಿ-ಪಾಸ್ತಿ, ಕೋರ್ಟ್ - ಕಚೇರಿ, ಗರ್ಭಿಣಿ ತೊಂದರೆ, ವಿದೇಶ ಪ್ರವಾಸ, ಹಣಕಾಸಿನ ತೊಂದರೆ, ಮಾಟ-ಮಂತ್ರ, ಸತಿ-ಪತಿ ಕಲಹ, ಮನೆಯಲ್ಲಿ ಅಶಾಂತಿ, ಕೆಲಸ ಮತ್ತು ವ್ಯವಹಾರದಲ್ಲಿ ತೊಂದರೆ, ಪ್ರೇಮ ವಿಚಾರ ಇನ್ನೂ ಮುಂತಾದ ನಿಮ್ಮ ಎಲ್ಲಾ ಸಮಸ್ಯೆಗಳಿಗೆ ಒಮ್ಮೆ ಭೇಟಿ ನೀಡಿ ತಕ್ಷಣ ಪರಿಹರಿಸಿಕೊಳ್ಳಿ.
ಕುಡುಕರ ಅರಿವಿಲ್ಲದೆ ಕುಡಿತ ಬಿಡಿಸಲಾಗುವುದು.
ದಾವಣಗೆರೆ.
ಮೊ : 8133933804

**ಡಾ|| ಸೋಮಶೇಖರ್. ಎಸ್.ಎ.**
ಕೀಲು, ಮೂಳೆ ತಜ್ಞರು Rheumatologist (ರುಮಟಾಯ್ಡ್ ಆರ್ಥರೈಟಿಸ್) ಬೆಂಗಳೂರು ಇವರು ದಿ. 02.03.2022ರ ಬುಧವಾರ ಮತ್ತು 03.03.2022ರ ಗುರುವಾರದಂದು ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**15 ದಿನಗಳಲ್ಲಿ ಪರಿಹಾರ**
ಬಿ.ಪಿ., ಶುಗರ್, ಥೈರಾಯಿಡ್, ಗ್ಯಾಸ್ಟ್ರಿಕ್, ಮಂಡಿ / ಬೆನ್ನು / ಕಾಲು ನೋವು ವೆರಿಕೋಸ್ ವೇನ್ಸ್, ತೂಕದಲ್ಲಿ ಇಳಿಕೆ, ನಿದ್ರಾ ಹೀನತೆ, ಸ್ಟ್ರೋಕ್, ಕಾಲುಬಾವು ಯಾವುದೇ ಸಮಸ್ಯೆಗಳಿಗೆ ನೇರ ಪರಿಹಾರ (T&C) ಉಚಿತ ಥೆರಪಿಗಾಗಿ
86602 35013

**ಶ್ರೀ ಮುರುಘನ್ ಬೋರ್‌ವೆಲ್ಸ್**
ನಮ್ಮಲ್ಲಿ ಸೂಪರ್ ಫಾಸ್ಟ್ 4.5' ಇಂಚು ಬೋರ್‌ವೆಲ್ ಕೊರೆಯಲಾಗುವುದು. ಮನೆಯ ಒಳಗಡೆ ಮತ್ತು ಹೊರಗಡೆ 300-450 ಅಡಿಯವರೆಗೆ ಕೊರೆಯಲಾಗುವುದು.
99640 78484, 95906 15776

**PG / HOSTEL**
Building ಬಾಡಿಗೆಗೆ
15 Rooms with attached Bathrooms + Kitchen & Dining Hall. Address : 6th Cross, BIET College Road, Near Bapuji High School, Davanagere.
99725 35329, 85531 84854

**ಶ್ರೀ ಧರ್ಮಸ್ಥಳ ಮಂಜುನಾಥಸ್ವಾಮಿ ದೈವಶಕ್ತಿ ಜ್ಯೋತಿಷರು**
ಪಂ. ಮಂಜುನಾಥ ಭಟ್, ನಂ.1 ವಶೀಕರಣ ಸ್ಪೆಷಲಿಸ್ಟ್ ಸಮಸ್ಯೆ, ವಿದ್ಯೆ, ಉದ್ಯೋಗ, ಆರೋಗ್ಯ ಹಣಕಾಸು, ಸಾಲಬಾಧೆ, ಮಾಟ-ಮಂತ್ರ, ವಿ ಸೂ: ಸ್ತ್ರೀ- ಪುರುಷ ವಶೀಕರಣಕ್ಕೆ ಕೇವಲ 3 ದಿನಗಳಲ್ಲಿ ಪರಿಹಾರ ಶತಸಿದ್ಧ, ನಿಮ್ಮ ಯಾವುದೇ ಸಮಸ್ಯೆಯಿದ್ದರೂ ಫೋನಿನ ಮೂಲಕ ಸಂಪರ್ಕಿಸಿ ಸಮಸ್ಯೆ ಪರಿಹರಿಸಿಕೊಳ್ಳಿ
82176 83615

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ. SSLC, PUC, Technical & Non Technical, Pharmacy & BHMS (Government & Private College)
ಕೆಲವೇ ಸೀಟುಗಳು ಲಭ್ಯ
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ರಾಂ ಅಂಡ್ ಕೋ ಸರ್ಕಲ್, ಗಣೇಶ ದೇವಸ್ಥಾನದ ಹಿಂಭಾಗ, ಸೋಮು ಮೆಡಿಕಲ್ಸ್ ಮೇಲೆ, ದಾವಣಗೆರೆ.
87490 24789, 82173 02649

# ಉಕ್ರೇನ್‌ನಲ್ಲಿರುವ ವಿದ್ಯಾರ್ಥಿಗಳು ರೊಮೇನಿಯ ಮೂಲಕ ವಾಪಸ್

ನವದೆಹಲಿ, ಫೆ. 25 - ರೊಮೇನಿಯಾದ ರಾಜಧಾನಿ ಬುಕಾರೆಸ್ಟ್‌ಗೆ ಎರಡು ವಿಮಾನಗಳನ್ನು ಕಳಿಸಿ ಅಲ್ಲಿ ಅತಂತ್ರವಾಗಿರುವ ಭಾರತೀಯರನ್ನು ವಾಪಸ್ ಕರೆಯಲು ಭಾರತ ಯೋಜಿಸಿದೆ ಎಂದು ಕೇಂದ್ರ ಸರ್ಕಾರದ ಹಿರಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

ರಸ್ತೆ ಮೂಲಕ ಭಾರತೀಯರು ಉಕ್ರೇನ್ - ರೊಮೇನಿಯಾ ಗಡಿ ತಲುಪಿದ್ದಾರೆ. ಅವರನ್ನು ಬುಕಾರೆಸ್ಟ್‌ಗೆ ಕರೆದೊಯ್ಯಲಾಗುವುದು. ಅಲ್ಲಿಂದ ಏರ್ ಇಂಡಿಯಾದ ಎರಡು ವಿಮಾನಗಳಲ್ಲಿ ವಾಪಸ್ ಕರೆ ತರಲು ಯೋಜಿಸಲಾಗಿದೆ.

ರಷ್ಯಾ ದಾಳಿಯ ನಂತರ ಉಕ್ರೇನ್ ವೈಮಾನಿಕ ಪ್ರದೇಶವನ್ನು ನಾಗರಿಕ ವಿಮಾನಗಳಿಗೆ ಮುಚ್ಚಲಾಗಿದೆ. ಹೀಗಾಗಿ ಭಾರತೀಯರನ್ನು ವಾಪಸ್ ಕರೆ ತರಲು ಬುಕಾರೆಸ್ಟ್ ಮಾರ್ಗ ಆಯ್ದುಕೊಳ್ಳಲಾಗಿದೆ.

ಉಕ್ರೇನ್‌ನಲ್ಲಿ 20 ಸಾವಿರ ಭಾರತೀಯರಿದ್ದಾರೆ. ಇವರಲ್ಲಿ ಬಹುತೇಕರು ವಿದ್ಯಾರ್ಥಿಗಳಾಗಿದ್ದಾರೆ.

ಉಕ್ರೇನ್ ರಾಜಧಾನಿ ಕೀವ್ ಹಾಗೂ ರೊಮೇನಿಯಾದ ಗಡಿ ನಡುವಿನ ಅಂತರ 600 ಕಿ.ಮೀ. ಆಗಿದೆ. ಈ ದೂರ ಕ್ರಮಿಸಲು 11 ಗಂಟೆಗಳವರೆಗೆ ಸಮಯ ಬೇಕಾಗುತ್ತದೆ. ಅಲ್ಲಿಂದ ಬುಕಾರೆಸ್ಟ್ 500 ಕಿ.ಮೀ. ದೂರದಲ್ಲಿದೆ.

## ನಗರದಲ್ಲಿಂದು ಜೆಡಿಎಸ್ ಸಭೆ

ಜೆಡಿಎಸ್ ಉತ್ತರ ವಿಧಾನಸಭಾ ಕ್ಷೇತ್ರದ ಸದಸ್ಯತ್ವ ನೋಂದಣಿ ಕಾರ್ಯಕ್ರಮ ಮತ್ತು ಕಾರ್ಯಕರ್ತರ ಸಭೆಯನ್ನು ಇಂದು ಮಧ್ಯಾಹ್ನ 3ಕ್ಕೆ ರೋಟರಿ ಬಾಲಭವನದಲ್ಲಿ ಆಯೋಜಿಸಲಾಗಿದೆ.

ಹೆಚ್.ಎಸ್.ಶಿವಶಂಕರ್, ಬಿ.ಚಿದಾನಂದಪ್ಪ, ಗಣೇಶ್ ದಾಸಕರಿಯಪ್ಪ, ಜೆ.ಅಮಾನುಲ್ಲಾ ಖಾನ್, ಟಿ.ಅಸ್ಗರ್ ಭಾಗವಹಿಸುವರು.

# ಕಾರ್ಮಿಕರ ಭವಿಷ್ಯ ನಿಧಿಯಲ್ಲಿನ ವಂಚನೆ ತಡೆಯಬೇಕು

## ನಗರದಲ್ಲಿ ಎಐಯುಟಿಯುಸಿ ಪ್ರತಿಭಟನೆ




ದಾವಣಗೆರೆ, ಫೆ.25- ಜಿಲ್ಲೆಯ ಕಾರ್ಮಿಕರಿಗೆ ಭವಿಷ್ಯ ನಿಧಿಯಲ್ಲಿನ ವಂಚನೆ ತಡೆಯಬೇಕು, ಸಹಾಯಕ ಆಯುಕ್ತರ ಭವಿಷ್ಯ ನಿಧಿ ಅಧಿಕಾರಿ ನೇಮಿಸಬೇಕು ಹಾಗೂ ಇಎಸ್ಐ ಆಸ್ಪತ್ರೆಯಲ್ಲಿ ಮೂಲ ಸೌಕರ್ಯ ಒದಗಿಸುವಂತೆ ಆಗ್ರಹಿಸಿ, ಆಲ್ ಇಂಡಿಯಾ ಯುನೈಟೆಡ್ ಟ್ರೇಡ್ ಯೂನಿಯನ್ ಸೆಂಟರ್ (ಎಐಯುಟಿಯುಸಿ) ವತಿಯಿಂದ ನಗರದ ಭವಿಷ್ಯ ನಿಧಿ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಲಾಯಿತು.

ಜಿಲ್ಲೆಯ ವ್ಯಾಪ್ತಿಗೆ ಬರುವ ಸರ್ಕಾರಿ ಇಲಾಖೆಗಳು, ಶಾಲಾ-ಕಾಲೇಜುಗಳು, ಬಟ್ಟೆ ವ್ಯಾಪಾರಸ್ಥ ಸಂಸ್ಥೆಗಳು, ಔಷಧ ಸರಬರಾಜು ಸಂಸ್ಥೆಗಳು, ಹೋಟೆಲ್ ಇನ್ನಿತರೆ ಖಾಸಗೀ ಸಂಸ್ಥೆಗಳಲ್ಲಿ ಕಾರ್ಮಿಕರು ದಿನಗೂಲಿ ಕೆಲಸ ಮಾಡುತ್ತಿದ್ದು, ಅವರಿಗೆ ಉದ್ಯೋಗ ನೀಡುವ ಮಾಲೀಕರು ಅಥವಾ ಏಜೆನ್ಸಿಗಳು ಇಪಿಎಫ್ ಹಾಗೂ ಇಎಸ್ಐ ಹಣ ತುಂಬುವಲ್ಲಿ ವಂಚನೆ ಮಾಡುತ್ತಿದ್ದಾರೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಈಗಾಗಲೇ ದೂರು ನೀಡಿರುವ ಬಿ.ಕೆ. ಆರ್.ಸ್ವಾಮಿ ಸೆಕ್ಯೂರಿಟಿ ಏಜೆನ್ಸಿ, ಟಾರ್ಗೆಟ್ ಏಜೆನ್ಸಿ, ದಾವಣಗೆರೆ ಸೆಕ್ಯುರಿಟಿ ಏಜೆನ್ಸಿ ಮತ್ತಿತರರು ಕಾರ್ಮಿಕರಿಗೆ ಭವಿಷ್ಯ ನಿಧಿ ಹಣ ತುಂಬುವಲ್ಲಿ ವಂಚನೆ ಮಾಡಿದ್ದು, ಈ ಏಜೆನ್ಸಿ ಮಾಲೀಕರ ವಿರುದ್ಧ ದೂರು ದಾಖಲಿಸಿಕೊಂಡು 7-ಎ ಅಡಿಯಲ್ಲಿ ತ್ವರಿತವಾಗಿ ವಿಚಾರಣೆ ಆರಂಭಿಸಬೇಕು ಮತ್ತು ಇಂತಹ ಏಜೆನ್ಸಿಗಳ ಇ.ಪಿ.ಎಫ್ ನೋಂದಣಿ ರದ್ದುಗೊಳಿಸಿ ಕಪ್ಪು ಪಟ್ಟಿಗೆ ಸೇರಿಸಬೇಕು.

ಹಿಂದಿನಂತೆ ಜಿಲ್ಲೆಯ ಇ.ಪಿ.ಎಫ್ ಕಛೇರಿಗೆ ಸಹಾಯಕ ಪ್ರಾಂತೀಯ ಅಧಿಕಾರಿಯನ್ನು ನಿಯೋಜಿಸಬೇಕು. ಇ.ಪಿ.ಎಫ್ ಗೆ ಸಂಬಂಧಿಸಿದ ಕುಂದು ಕೊರತೆಗಳ ಸಭೆಯನ್ನು ಆಯೋಜಿಸಬೇಕು ಮತ್ತು ಕಾರ್ಮಿಕ ಸಂಘಟನೆಗಳನ್ನೊಳಗೊಂಡ ಸಮಿತಿ ರಚಿಸಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಎಐಯುಟಿಯುಸಿ ಉಪಾಧ್ಯಕ್ಷ ಶಿವಾಜಿರಾವ್, ಮುಖಂಡರಾದ ತಿಪ್ಪೇಸ್ವಾಮಿ ಅಣಬೇರು, ಮಂಜುಳಮ್ಮ, ಹನುಮಂತಪ್ಪ, ಮನೋಹರ್, ಸುಮ, ಲೋಕೇಶ್, ಬೀರಲಿಂಗಪ್ಪ, ಲಕ್ಷ್ಮಣ್, ಪರಶುರಾಮ್, ವಿರುಪಾಕ್ಷಪ್ಪ, ಪರಮೇಶ್ವರ್, ರತ್ನಮ್ಮ, ಸಿದ್ದಮ್ಮ, ರಾಧಮ್ಮ ಸೇರಿದಂತೆ ಇತರರು ಭಾಗವಹಿಸಿದ್ದರು.

## ಬಾಪೂಜಿ ಬಿ-ಸ್ಕೂಲ್‌ನಲ್ಲಿ ನಾಡಿದ್ದು ರಾಜ್ಯಮಟ್ಟದ ವಾಣಿಜ್ಯೋತ್ಸವ

ದಾವಣಗೆರೆ, ಫೆ. 25- ನಗರದ ಬಾಪೂಜಿ ಇನ್‌ಸ್ಟಿಟ್ಯೂಟ್ ಆಫ್ ಹೈ-ಟೆಕ್ ಎಜುಕೇಶನ್ ಕಾಲೇಜಿನಲ್ಲಿ ಇದೇ ದಿನಾಂಕ 28 ರಂದು ಪಿಯುಸಿ ವಿದ್ಯಾರ್ಥಿಗಳಿಗಾಗಿ ವಿನೂತನ ವಾಣಿಜ್ಯ ಪ್ರದರ್ಶನ ಆಯೋಜಿಸಲಾಗಿದೆ.

ಧಾರವಾಡದ ಹ್ಯೂಮನ್ ಮೈಂಡ್ ಸೆಟ್ ಕೋಚ್ ಮಹೇಶ್ ಬಿ. ಮಸಾಳ್ ಕಾರ್ಯಕ್ರಮ ಉದ್ಘಾಟಿಸುವರು. ಕಾಲೇಜಿನ ಅಧ್ಯಕ್ಷರಾದ ಅಥಣಿ ಎಸ್. ವೀರಣ್ಣ ಅಧ್ಯಕ್ಷತೆ ವಹಿಸಲಿದ್ದಾರೆ. ಪ್ರಾಚಾರ್ಯ ಡಾ. ಬಿ. ವೀರಪ್ಪ ಉಪಸ್ಥಿತರಿರುವರು. ವಾಣಿಜ್ಯೋತ್ಸವದ ಅಂಗವಾಗಿ ಮಾಡೆಲ್ ಪ್ರಜೆಂಟೇಶನ್, ಮಾರ್ಕೆಂಟಿಂಗ್ ಸ್ಟೋರೀಸ್, ಯಂಗ್ ಎಂಟರ್‌ಪ್ರಿನ್ಯೂರ್, ಬ್ಯುಸಿನೆಸ್ ಕ್ವಿಜ್, ಇಂಟರ್ ನ್ಯಾಷನಲ್ ಕರೆನ್ಸಿ ಎಕ್ಸಿಬಿಷನ್, ಪೋಸ್ಟರ್ ಪ್ರೆಜೆಂಟೇಶನ್, ಶೋಕೇಷಿಂಗ್ 20ನೇ ಸೆಂಚುರಿ ಪ್ರಾಡಕ್ಸ್ ಮತ್ತು ಕಲಾತ್ಮಕ ನೃತ್ಯ ಎಂಬ ವಿಭಿನ್ನ, ವಿನೂತನ ಕಾರ್ಯಕ್ರಮಗಳು ನಡೆಯಲಿವೆ ಎಂದು ನಿರ್ದೇಶಕ ಡಾ. ಸ್ವಾಮಿ ತ್ರಿಭುವಾನಂದ ತಿಳಿಸಿದ್ದಾರೆ. ಆಸಕ್ತ ಪಿಯುಸಿ ವಿದ್ಯಾರ್ಥಿಗಳು 85539-71434, 98804-50803 ಗೆ ಸಂಪರ್ಕಿಸಬಹುದು.

## ಮಾ. 1 ರಂದು ಮಹಾಶಿವರಾತ್ರಿ ಪರ್ವ

ದಾವಣಗೆರೆ, ಫೆ.25- ನಗರದ ಪಿ.ಬಿ. ರಸ್ತೆಯಲ್ಲಿರುವ ಶ್ರೀ ಬೀರಲಿಂಗೇಶ್ವರ ದೇವಸ್ಥಾನದಲ್ಲಿ ಮಾರ್ಚ್ 1 ರಿಂದ ಶ್ರೀ ಮಹಾಶಿವರಾತ್ರಿ ಪರ್ವ ನಡೆಯಲಿದೆ.

ಮಾ. 1 ರ ಮಂಗಳವಾರ ಪದ್ಧತಿಯಂತೆ ಬೆಳಿಗ್ಗೆ 6 ಗಂಟೆಗೆ ಶ್ರೀ ಬೀರಲಿಂಗೇಶ್ವರ ಸ್ವಾಮಿಗೆ ರುದ್ರಾಭಿಷೇಕ ಜರುಗಲಿದೆ.

ಮಾರ್ಚ್ 2 ರ ಮಧ್ಯಾಹ್ನ 12 ಗಂಟೆಗೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ ಎಂದು ಜೆ.ಕೆ. ಕೊಟ್ರಬಸಪ್ಪ ತಿಳಿಸಿದ್ದಾರೆ.

## ಬ್ರಾಹ್ಮಣ ಸಮಾಜದಿಂದ ಇಂದು ಪುರಸ್ಕಾರ, ಭಗವದ್ಗೀತೆ ಕಂಠಪಾಠ

ರಾಣೇಬೆನ್ನೂರು

ರಾಣೇಬೆನ್ನೂರು ತಾಲ್ಲೂಕು ಬ್ರಾಹ್ಮಣ ಸಮಾಜದಿಂದ ಕೋಟೆ ಶಂಕರ ಮಠದಲ್ಲಿ ಇಂದು ಸಂಜೆ ಪ್ರತಿಭಾ ಪುರಸ್ಕಾರ ಹಾಗೂ ಭಗವದ್ಗೀತೆ ಕಂಠಪಾಠ ಸ್ಪರ್ಧೆ ನಡೆಯಲಿದೆ. ತಾಲ್ಲೂಕು ಅಧ್ಯಕ್ಷ ದತ್ತಾತ್ರೇಯ ನಾಡಿಗೇರ ಅಧ್ಯಕ್ಷತೆ ವಹಿಸಲಿದ್ದು. ರಾಜ್ಯ ಪದಾಧಿಕಾರಿಗಳಾದ ಪ್ರಮೋದ ಮನೋಳಿ, ವೆಂಕಟೇಶನಾಯ್ಕ, ಜಿ.ಎಲ್. ನಾಡಿಗೇರ, ಉಮೇಶ ವಿಶ್ವರೂಪ ಪಾಲ್ಗೊಳ್ಳುವರು. ರಾಘವೇಂದ್ರ ಕುಲಕರ್ಣಿ, ಶ್ರೀ ಪಾದ ಕುಲಕರ್ಣಿ, ಜಯತೀರ್ಥಾಚಾರ್ ಚಿಂದಿ ಅವರುಗಳಿಗೆ ಸನ್ಮಾನ ನಡೆಯಲಿದೆ.

# ಧಾರ್ಮಿಕ, ರಾಜಕೀಯ, ಶೈಕ್ಷಣಿಕ ಕ್ರಾಂತಿಯಾದಾಗ ಹಿಂದುಳಿದ ಸಮಾಜಗಳು ಮುಂದೆ ಬರಲು ಸಾಧ್ಯ



### ಶ್ರೀ ಅಂಬಿಗರ ಚೌಡಯ್ಯ ಗುರು ಪೀಠದ ಜಗದ್ಗುರು ಶ್ರೀ ಶಾಂತಭೀಷ್ಮ ಚೌಡಯ್ಯ ಮಹಾಸ್ವಾಮೀಜಿ ಅಭಿಮತ

ಹರಿಹರ,ಫೆ.25- ಹಿಂದುಳಿದ ಸಮಾಜಗಳು ಮುಂದೆ ಬರಬೇಕಾದರೆ ಆ ಸಮಾಜಗಳಲ್ಲಿ ಧಾರ್ಮಿಕ, ರಾಜಕೀಯ ಮತ್ತು ಶೈಕ್ಷಣಿಕ ಕ್ರಾಂತಿಯಾಗಬೇಕು ಎಂದು ನರಸೀಪುರದ ಶ್ರೀ ನಿಜಶರಣ ಅಂಬಿಗರ ಚೌಡಯ್ಯನವರ ಗುರು ಪೀಠದ ಜಗದ್ಗುರು ಶ್ರೀ ಶಾಂತಭೀಷ್ಮ ಚೌಡಯ್ಯ ಮಹಾಸ್ವಾಮಿಗಳು ಅಭಿಪ್ರಾಯಪಟ್ಟರು.

ತಾಲ್ಲೂಕಿನ ಕುಣೆಬೆಳಕೆರೆ ಗ್ರಾಮದಲ್ಲಿ ಶ್ರೀ ಗಂಗಾಪರಮೇಶ್ವರಿ ದೇವಿಯ ನೂತನ ವಿಗ್ರಹ ಮೂರ್ತಿ ಪ್ರಾಣ ಪ್ರತಿಷ್ಠಾಪನೆ ಅಂಗವಾಗಿ ನಡೆದ ಧಾರ್ಮಿಕ ಸಭೆಯ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಧಾರ್ಮಿಕ ಕ್ರಾಂತಿಯಾದರೆ ಆ ಸಮಾಜ ಮೌಢ್ಯತೆಯಿಂದ ಹೊರಬಂದು ಸುಸಂಸ್ಕೃತ ಬದುಕು ಕಟ್ಟಿಕೊಳ್ಳಲು ಸಾಧ್ಯ. ಶಿಕ್ಷಣ ಕ್ರಾಂತಿಯಾದರೆ ಆ ಸಮಾಜ ಶೀಘ್ರ ಮುಂದೆ ಬರುತ್ತದೆ. ರಾಜಕೀಯ ಕ್ರಾಂತಿಯಾದರೆ ಎಲ್ಲಾ ರೀತಿಯಿಂದಲೂ ಸೌಲಭ್ಯಗಳು ಸಿಗಲು ಸಾಧ್ಯ ಎಂದು ಅವರು ವಿವರಿಸಿದರು.

ಸಂವಿಧಾನದ ಪ್ರಕಾರ ಸಣ್ಣದಾದ ಗಂಗಾಮತ ಸಮಾಜಕ್ಕೆ ಎಸ್ಟಿ ಮೀಸಲಾತಿ ಸಿಗದಿರುವುದು ದುರ್ದೈವದ ಸಂಗತಿ. ಶತ ಶತಮಾನಗಳಿಂದಲೂ ತುಳಿತಕ್ಕೆ ಒಳಗಾದ ಸಮಾಜಗಳು ಸ್ವತಃ ತಮ್ಮ ಕೈಯ್ಯೂರಿ, ತಾವೇ ಎದ್ದೇಳಬೇಕು ಎಂದು ಶ್ರೀಗಳು ಸಲಹೆ ನೀಡಿದರು.

ಅಧ್ಯಕ್ಷತೆಯನ್ನು ಕೂಲಂಬಿ ಮಹಾದೇವಪ್ಪ ವಹಿಸಿದ್ದರು. ಕಾರ್ಯಕ್ರಮ ವನ್ನು ಮಾಜಿ ಶಾಸಕ ಬಿ.ಪಿ.ಹರೀಶ್ ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿದ್ದ ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್, ಗಂಗಾಮತ ಸಮಾಜದ ಜಿಲ್ಲಾಧ್ಯಕ್ಷ ಬಿ.ಕೆ. ಮಂಜುನಾಥ ಮಾಗಾನಹಳ್ಳಿ, ಮಾಜಿ ಅಧ್ಯಕ್ಷ ಮಾಗಾನಹಳ್ಳಿ ಹಾಲಪ್ಪ, ರೈಸ್ ಮಿಲ್ ಮಾಲೀಕ ವಿರೂಪಾಕ್ಷಪ್ಪ, ನಿವೃತ್ತ ಪೊಲೀಸ್ ಅಧಿಕಾರಿ ಕೆ. ಎಸ್. ದೇವೇಂದ್ರಪ್ಪ, ನಾಗೇಂದ್ರಪ್ಪ ಮತ್ತಿತರರು ಮಾತನಾಡಿದರು.

ವೇದಿಕೆಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ವೀರೇಶ್ ಹನಗವಾಡಿ, ಶಾಸಕ ಎಸ್.ರಾಮಪ್ಪನವರ ಪುತ್ರ ಯತಿರಾಜ್, ಬೆಸ್ಕಾಂನ ಜಿ.ರಾಮಚಂದ್ರಪ್ಪ, ನಂದಿಗಾವಿ ಶ್ರೀನಿವಾಸ್, ಸಮಾಜದ ಮುಖಂಡರಾದ ಜಿ.ಬಿ.ಬಸವರಾಜಪ್ಪ, ಕೆಂಚನಹಳ್ಳಿ ಮಹಾಂತೇಶಪ್ಪ, ಪೇಟೆ ಬಸಪ್ಪ, ರಾಟಿ ರಮೇಶ್, ಬಲ್ಲೂರು ಹೆಚ್. ನಾಗರಾಜ್, ಎಂ.ಎನ್. ಮಂಜುನಾಥ್, ಜಿ.ಹೆಚ್. ಮಂಜುನಾಥ್ ಮತ್ತಿತರರು ಉಪಸ್ಥಿತರಿದ್ದರು.

## ಹೊನ್ನಾಳಿಯಲ್ಲಿ ಇಂದು ಬಿಜೆಪಿ ಪ್ರತಿಭಟನೆ

ಇತ್ತೀಚೆಗೆ ನಡೆದ ರಾಜ್ಯ ವಿಧಾನಸಭಾ ಕಲಾಪ ದಲ್ಲಿ ಸಮಯವನ್ನು ವ್ಯರ್ಥಮಾಡಿದ ಕಾಂಗ್ರೆಸ್ ಶಾಸಕರುಗಳ ವರ್ತನೆಯನ್ನು ಖಂಡಿಸಿ, ತಾಲ್ಲೂಕು ಬಿಜೆಪಿ ವತಿಯಿಂದ ಇಂದು ಬೆಳಿಗ್ಗೆ 11 ಗಂಟೆಗೆ ಪ್ರತಿಭಟನಾ ಮೆರವಣಿಗೆ ಹಮ್ಮಿಕೊಂಡಿರುವುದಾಗಿ ತಾಲ್ಲೂಕು ಬಿಜೆಪಿ ಅಧ್ಯಕ್ಷ ಜೆ.ಕೆ. ಸುರೇಶ್ ತಿಳಿಸಿದ್ದಾರೆ. ಸಂಗೊಳ್ಳಿ ರಾಯಣ್ಣ ವೃತ್ತದಿಂದ ತಾಲ್ಲೂಕು ಕಛೇರಿಯವರೆಗೆ ಪ್ರತಿಭಟನಾ ಮೆರವಣಿಗೆ ನಡೆಸುವುದಾಗಿ ಹೇಳಿದರು. ಈ ಸಂದರ್ಭದಲ್ಲಿ ಮುಖಂಡರಾದ ಕೆ.ವಿ. ಚನ್ನಪ್ಪ, ಕುಬೇಂದ್ರಪ್ಪ, ನೆಲಹೊನ್ನೆ ಮಂಜುನಾಥ್, ಅರಕೆರೆ ನಾಗರಾಜ್ ಇನ್ನಿತರರಿದ್ದರು.

## ಉಕ್ರೇನ್‌ನಲ್ಲಿ ಸಿಲುಕಿರುವ ನಗರದ ಆರು ಜನರ ರಕ್ಷಣೆ ನಮ್ಮ ಹೊಣೆ

ದಾವಣಗೆರೆ, ಫೆ. 25- ಉಕ್ರೇನ್ ಹಾಗೂ ರಷ್ಯಾ ನಡುವೆ ಪ್ರಾರಂಭವಾಗಿರುವ ಯುದ್ಧದ ಪರಿಣಾಮ ಉಕ್ರೇನ್‌ನಲ್ಲಿ ಯುದ್ಧದ ಕಾರ್ಮೋಡ ಆವರಿಸಿದೆ.

ಉಕ್ರೇನ್‌ಗೆ ತೆರಳಿದ್ದ ದಾವಣಗೆರೆ ಜಿಲ್ಲೆಯ ಆರು ಜನರು ಆತಂಕಗೊಂಡಿದ್ದು, ತಾಯ್ನಾಡಿಗೆ ಮರಳಲು ಸಾಕಷ್ಟು ಪ್ರಯಾಸ ಪಡುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಜಿಲ್ಲೆಯ ಡಾ. ಅಶೋಕ್, ಸೈಯದ್ ಹಬೀಬ್, ಪ್ರಿಯಾ, ಮೊಹಮ್ಮದ್ ಹಬೀದ್ ಅಲಿ ಸೇರಿದಂತೆ ಆರು ಜನರನ್ನು ಸುರಕ್ಷಿತವಾಗಿ ಕರೆತರಲು ಅಗತ್ಯವಾದ ಎಲ್ಲಾ ಪ್ರಯತ್ನಗಳನ್ನು ಮಾಡಲಾಗಿದೆ ಎಂದು ಸಂಸದ ಜಿ.ಎಂ. ಸಿದ್ದೇಶ್ವರ ತಿಳಿಸಿದ್ದಾರೆ.

ಕೇಂದ್ರ ವಿದೇಶಾಂಗ ಸಚಿವ ಜೈಶಂಕರ್, ರಾಜ್ಯ ಸಚಿವರಾದ ವಿ. ಮುರುಳೀಧರನ್, ಮೀನಾಕ್ಷಿ ಲೇಖಿ, ಡಾ. ರಾಜಕುಮಾರ್ ರಂಜನ್ ಸಿಂಗ್, ವಿದೇಶಾಂಗ ಕಾರ್ಯದರ್ಶಿ ಹರ್ಷವರ್ಧನ್ ಶ್ರಿಂಗ್ಲಾ ಅವರಿಗೆ ಮನವಿ ಮಾಡಲಾಗಿದೆ ಎಂದು ಹೇಳಿದ್ದಾರೆ.

ಪೋಷಕರು ಹಾಗೂ ಕುಟುಂಬದವರು ಆತಂಕಕ್ಕೊಳಗಾಗುವುದು ಬೇಡ. ಉಕ್ರೇನ್‌ನಲ್ಲಿ ಸಿಲುಕಿರುವ ಜಿಲ್ಲೆಯ ಜನರನ್ನು ಸುರಕ್ಷಿತವಾಗಿ ಕರೆತರಲಾಗುವುದು ಎಂದು ಸಿದ್ದೇಶ್ವರ ತಿಳಿಸಿದ್ದಾರೆ.

## ಪತ್ರಕರ್ತ ಬಕ್ಕೇಶ್ ನಾಗನೂರು ಅವರಿಗೆ ಗುರುರಕ್ಷೆ



ಹರಿಹರ, ಫೆ.25- ತಾಲ್ಲೂಕಿನ ಕುಣೆಬೆಳಕೆರೆ ಗ್ರಾಮದಲ್ಲಿ ಶ್ರೀ ವೀರಾಂಜನೇಯ ದೇವಸ್ಥಾನದ ಕಳಸಾರೋಹಣ ಸಮಾರಂಭದಲ್ಲಿ ಶ್ರೀರಂಭಾಪುರಿ ಜಗದ್ಗುರುಗಳು ಹಿರಿಯ ಪತ್ರಕರ್ತ ಬಕ್ಕೇಶ್ ನಾಗನೂರು ಅವರಿಗೆ ಗುರುರಕ್ಷೆ ನೀಡಿದರು.

# ಬಂಗಾರದ ವ್ಯಾಪಾರಿಯ ಸಹೋದರನ ಕೊಲೆಗೈದ ಪರಿಚಿತ ಆಭರಣ ತಯಾರಕ

ದಾವಣಗೆರೆ, ಫೆ.25 - ಬಂಗಾರದ ಒಡವೆಯನ್ನು ತಯಾರಿಸದ ಕಾರಣ ಬಂಗಾರ ವಾಪಸ್ ನೀಡುವಂತೆ ಕೇಳಿದ್ದಕ್ಕೆ ಒಡವೆ ನೀಡಿದ್ದ ಪರಿಚಿತ ಬಂಗಾರದ ವ್ಯಾಪಾರಿಯ ಸಹೋದರನಿಗೆ ಸೋಡಾದಲ್ಲಿ ಸೈನೈಡ್ ಹಾಕಿ ಕೊಲೆ ಮಾಡಿದ ಪ್ರಕರಣವನ್ನು ಬೇಧಿಸಿರುವ ಇಲ್ಲಿನ ಬಡಾವಣೆ ಪೊಲೀಸರು, ಆರೋಪಿ ಆಭರಣ ತಯಾರಕನನ್ನು ಬಂಧಿಸಿದ್ದಾರೆ.

ವಿನೋಬ ನಗರದ ಮಂಜುನಾಥ ಚಿತ್ರಗಾರ ಅಲಿಯಾಸ್ ಪಿಂಟು (30) ಬಂಧಿತನು. ವಿನೋಬ ನಗರದ ದರ್ಶನ್ ರಾಯ್ಕರ್ ಅವರು ತಮಗೆ ಪರಿಚಯವಿದ್ದ ಬಂಧಿತ ಆರೋಪಿ ಪಿಂಟುಗೆ ಚಿನ್ನದ ಒಡವೆಗಳನ್ನು ಮಾಡಿ ಕೊಡುವಂತೆ ಇದೇ ಜನವರಿ 4 ರಂದು 110 ಗ್ರಾಂ ಬಂಗಾರವನ್ನು ಕೊಟ್ಟಿದ್ದರು. ಆದರೆ, ಆತ ಒಡವೆಗಳನ್ನು ಕೊಟ್ಟಿರಲಿಲ್ಲ.

ಕೊನೆಗೆ ಮಂಜುನಾಥ ಚಿತ್ರಗಾರನ ಮನೆಗೆ ದರ್ಶನ್ ರಾಯ್ಕರ್ ಹೋಗಿ ಒಡವೆಗಳನ್ನು ಕೊಡುವಂತೆ ಕೇಳಿದ್ದು, ಆಗ ಆರೋಪಿತನು ತನಗೆ ಆರೋಗ್ಯ ಸರಿ ಇಲ್ಲ ಆಸ್ಪತ್ರೆಗೆ ಹೋಗಿ ತಂದು ಕೊಡುವುದಾಗಿ ಹೇಳಿದ್ದಾನೆ.

ಇದರಿಂದ ಅನುಮಾನಗೊಂಡ ದರ್ಶನ್ ರಾಯ್ಕರ್ ಅವರ ಸಹೋದರ ಅರ್ಜುನ್ ರಾಯ್ಕರ್ ಬಂಧಿತ ಪಿಂಟು ಜೊತೆಗೆ ಬೈಕಿನಲ್ಲಿ ಹೋಗಿದ್ದು, ಪುನಃ ಮನೆ ಹತ್ತಿರ ಬಂದಿದ್ದಾರೆ. ಈ ವೇಳೆ ಅರ್ಜುನ್ ರಾಯ್ಕರ್‌ಗೆ ಜೀರಾ ಸೋಡಾ ಕೊಟ್ಟು ಇದನ್ನು ಕುಡಿಯುತ್ತಿರು ಮನೆಗೆ ಹೋಗಿ ಒಡವೆ ತರುತ್ತೇನೆ ಎಂದು ಆರೋಪಿ ಪಿಂಟು ಹೇಳಿ ಹೋಗಿದ್ದಾನೆ.

ಅರ್ಜುನ್ ಅವರು ಜೀರಾ ಸೋಡಾ ಕುಡಿದು ತೀವ್ರ ಅಸ್ವಸ್ಥಗೊಂಡಿದ್ದಾರೆ. ತಕ್ಷಣವೇ ಆಸ್ಪತ್ರೆಗೆ ಕರೆದೊಯ್ದು ದಾಖಲಿಸಿದರೂ ಚಿಕಿತ್ಸೆ ಫಲಿಸದೇ ಅರ್ಜುನ್ ಸಾವನ್ನಪ್ಪಿದ್ದರು.

ಅರ್ಜುನ್ ಸಾವಿನ ಬಗ್ಗೆ ಸಹೋದರ ದರ್ಶನ್ ರಾಯ್ಕರ್ ಅನುಮಾನ ವ್ಯಕ್ತಪಡಿಸಿ, ಬಡಾವಣೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದರು. ಪ್ರಕರಣದ ತನಿಖೆ ನಡೆಸಿದ ಪೊಲೀಸರಿಗೆ ಮೃತನ ಶವದ ಮರಣೋತ್ತರ ಪರೀಕ್ಷೆ ನಡೆಸಿದಾಗ, ಜೀರಾ ಸೋಡಾದಲ್ಲಿ ಸೈನೈಡ್ ಎಂಬ ವಿಷದ ಅಂಶವಿರುವುದು ಸ್ಪಷ್ಟವಾಗಿದೆ. ಕೂಡಲೇ ಆರೋಪಿತ ಪಿಂಟು ಸೆರೆ ಹಿಡಿದು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಎಎಸ್ಪಿ ರಾಮಗೊಂಡ ಬಿ. ಬಸರಗಿ ಮಾರ್ಗದರ್ಶನದಲ್ಲಿ ಡಿವೈಎಸ್ಪಿ ನರಸಿಂಹ ವಿ. ತಾಮ್ರಧ್ವಜ ನೇತೃತ್ವದಲ್ಲಿ ಬಡಾವಣೆ ಠಾಣೆ ನಿರೀಕ್ಷಕ ಬಿ. ಮಂಜುನಾಥ, ಸಿಬ್ಬಂದಿಗಳಾದ ಪಿ. ಹರೀಶ್, ಅಂಜಿನಪ್ಪ ಪೂಜಾರ, ಕೆ.ಬಿ. ಹರೀಶ್, ಎನ್.ಟಿ. ಸಿದ್ದೇಶ್, ಸೈಯದ್ ಅಲಿ, ಸಿ. ಹನುಮಂತಪ್ಪ, ಬಸವರಾಜ ಜಂಜೂರ್, ರಾಮಾಂಜನೇಯ ಕೊಂಡಿ ತಂಡ ಪ್ರಕರಣವನ್ನು ಪತ್ತೆ ಹಚ್ಚಿದೆ.

## ರಾಜ್ಯಮಟ್ಟದ ಫುಟ್‌ಬಾಲ್ ಪಂದ್ಯ

ದಾವಣಗೆರೆ, ಫೆ.25- ದೇವ ನಗರಿ ಕ್ರೀಡಾ ಮತ್ತು ಸಾಂಸ್ಕೃತಿಕ ಸಂಘದಿಂದ ಶಿವನಹಳ್ಳಿ ರಮೇಶ್ ಹುಟ್ಟುಹಬ್ಬದ ಅಂಗವಾಗಿ ಮಾರ್ಚ್ 1ರಂದು ರಾಜ್ಯ ಮಟ್ಟದ ಟೈಗರ್-5 ಫುಟ್‌ಬಾಲ್ ಪಂದ್ಯಾವಳಿ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಗೌರವಾಧ್ಯಕ್ಷ ಶಿವನಹಳ್ಳಿ ರಮೇಶ್ ತಿಳಿಸಿದ್ದಾರೆ.

ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಅಂಗವಾಗಿ

**ಪಂಚಕರ್ಮ ಚಿಕಿತ್ಸೆಗಳು ಶೇಕಡ 60% ರಷ್ಟು ರಿಯಾಯಿತಿಯಲ್ಲಿ**

* ಚರ್ಮರೋಗದ (ಸೋರಿಯಾಸಿಸ್) ಚಿಕಿತ್ಸೆ * ಎಲ್ಲಾ ತರಹದ ನೋವುಗಳಿಗೆ ಚಿಕಿತ್ಸೆ

(ಚಿಕಿತ್ಸೆಗೆ ಬಳಸುವ ಔಷಧಿ ಉಚಿತವಾಗಿ ದೊರೆಯುತ್ತದೆ)

ಈ ಶಿಬಿರವು 1 ತಿಂಗಳ ಕಾಲ (ಮಾರ್ಚ್ 01 ರಿಂದ 31ರವರೆಗೆ) ಏರ್ಪಡಿಸಲಾಗಿದೆ.

ಆಸಕ್ತರು ಫೆಬ್ರವರಿ 28ರೊಳಗೆ ಆಸ್ಪತ್ರೆಗೆ ಖುದ್ದು ಭೇಟಿ ನೀಡಿ ಹೆಸರು ನೋಂದಾಯಿಸಬೇಕು.

(ವಿ.ಸೂ. ಈ ಶಿಬಿರಕ್ಕೆ ಮೊದಲೇ ನೋಂದಾಯಿಸಿದ 10 ಜನರಿಗೆ ಮಾತ್ರ)

ಹೆಚ್ಚಿನ ಮಾಹಿತಿಗಾಗಿ :

ANVAYA

**ಅನ್ವಯ ಆಯುರ್ವೇದ ಆಸ್ಪತ್ರೆ**

#1981, 10ನೇ ಕ್ರಾಸ್, ಎಂ.ಸಿ.ಸಿ.'ಎ' ಬ್ಲಾಕ್, ಆಶ್ರಯ ಆಸ್ಪತ್ರೆ ಹಿಂಭಾಗ, ದಾವಣಗೆರೆ

ಫೋ: 08192 252228 ಮೊ: 86186 42929

## ಉಕ್ರೇನ್‌ನಲ್ಲಿ ಸಿಲುಕಿದ ಕರ್ನಾಟಕದ 346 ಜನರು

ಬೆಂಗಳೂರು, ಫೆ. 25 – ಉಕ್ರೇನ್‌ನಲ್ಲಿ ಕರ್ನಾಟಕದ 346 ಜನರು ಸಿಲುಕಿದ್ದು, ಅವರನ್ನು ವಾಪಸ್ ಕರೆ ತರಲು ಪ್ರಯತ್ನ ನಡೆಸಲಾಗುತ್ತಿದೆ ಎಂದು ರಾಜ್ಯ ಸರ್ಕಾರ ತಿಳಿಸಿದೆ.

ಸಮರ ಪೀಡಿತ ಉಕ್ರೇನ್‌ನಲ್ಲಿ ಇವರ ರಕ್ಷಣೆ ಹಾಗೂ ವಾಪಸ್ ಕರೆ ತರುವ ಕುರಿತು ವಿದೇಶಾಂಗ ವ್ಯವಹಾರಗಳ ಸಚಿವ ಜೈಶಂಕರ್ ಜೊತೆ ಮಾತನಾಡಿರುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ. ಶುಕ್ರವಾರ ಮಧ್ಯಾಹ್ನ 3 ಗಂಟೆಯವರೆಗೆ ಸಂಗ್ರಹಿಸಲಾದ ಮಾಹಿತಿಯ ಪ್ರಕಾರ, 346 ಜನರು ಉಕ್ರೇನ್‌ನಲ್ಲಿ ಸಿಲುಕಿದ್ದಾರೆ. ಇವರಲ್ಲಿ 115 ಜನ ಬೆಂಗಳೂರಿನವರು. ಮೈಸೂರಿನ 30, ವಿಜಯಪುರದ 24, ಬಾಗಲಕೋಟೆಯ 22, ತುಮಕೂರಿನ 16 ಜನರಿದ್ದಾರೆ.

## ಅತ್ಯಂತ ಅಪಾಯಕಾರಿ ಗುಂಡಿ !



**ಮಾನ್ಯರೇ,**

ನಗರದ ಮಧ್ಯ ಭಾಗದಲ್ಲಿರುವ ಹಳೇ ಅಂಡರ್ ಬ್ರಿಡ್ಜ್‌ನಲ್ಲಿ ಸಾವಿನ ಗುಂಡಿಯೊಂದು ಬಹುಶಃ ಬಲಿಗಾಗಿ ಕಾಯುತ್ತಿದೆ !.

ಪ್ರತಿದಿನ ಸಹಸ್ರಾರು ದ್ವಿಚಕ್ರ ವಾಹನ ಸವಾರರು ಈ ಮಾರ್ಗದಲ್ಲಿ ಸಂಚರಿಸುತ್ತಾರೆ. ಇಂತಹ ಜನನಿಬಿಡ ಪ್ರದೇಶದ ರಸ್ತೆಯಲ್ಲಿ ಆಗಿರುವ ಇಂತಹ ಅಪಾಯಕಾರಿ ಗುಂಡಿ, ಸಂಬಂಧ ಪಟ್ಟವರಿಗೆ ಏಕೆ ಕಂಡಿಲ್ಲವೆಂಬುದೇ ಆಶ್ಚರ್ಯ ಮತ್ತು ಅವರ ನಿರ್ಲಕ್ಷ್ಯಕ್ಕೆ ಕನ್ನಡಿ ಹಿಡಿಯುವಂತಹ ಆಘಾತಕಾರಿ ವಿಷಯ.

ಯಾರದ್ದಾದರೂ ಪ್ರಾಣಕ್ಕೆ ಸಂಚಕಾರ ಬರುವ ಮೊದಲೇ ಈ ಗುಂಡಿಯನ್ನು ಕೇವಲ ಮಣ್ಣು ತುಂಬದೇ ವ್ಯವಸ್ಥಿತವಾಗಿ ಉತ್ತಮ ಪ್ರಮಾಣದಲ್ಲಿ ಸಿಮೆಂಟ್ ಮಿಕ್ಸಿಂಗ್ ಇರುವ ಕಾಂಕ್ರೀಟ್ ತುಂಬಿಸಬೇಕಾಗಿದೆ.

**- ಜಯಚಂದ್**, ದಾವಣಗೆರೆ.

**ನಿರಂತರ ರೂರಲ್ ಸೇವಾ ಟ್ರಸ್ಟ್ (ರಿ)**

**ಅನುದಾನ ನೀಡಲು ಅರ್ಜಿ ಆಹ್ವಾನ**

**ಅನುದಾನದ ಪ್ರಮಾಣ / ಸಂಖ್ಯೆ**

**ರೂ. 25.000 ದವರೆಗೆ / 15 ಫಲಾನುಭವಿಗಳಿಗೆ.**

- ಸ್ವಯಂ ಉದ್ಯೋಗ ಚಟುವಟಿಕೆ ಆರಂಭಿಸಲು.
- ಹೊಸ ಕೌಶಲ್ಯದ ಸಾಧೀನ ಪಡೆಯಲು / ನೀಡಲು ಇಚ್ಚಿಸುವವರು.
- ಓದು ಮುಂದುವರಿಕೆ ಹಾಗೂ ಓದಿಗೆ ಸಂಬಂಧಪಟ್ಟ ಉಪಕರಣ ಖರೀದಿಸಲು.
- ಸಂಶೋಧನೆ / ಶೈಕ್ಷಣಿಕ ಯೋಜನಾ ವೆಚ್ಚ ಬಯಸುವವರು.
- ಅಂಗವಿಕಲರಿಗೆ ಉಪಯುಕ್ತವಾದ ಅಗತ್ಯವಿರುವ ಸಾಧನಗಳನ್ನು ಬಯಸುವವರು.

ಮೇಲ್ಕಂಡ ಉದ್ದೇಶಗಳಿಗೆ ಅನುದಾನ ಕೋರುವವರು ಮಾರ್ಚ್ 25 ರ ಒಳಗೆ 500 ಪದಗಳನ್ನು ಒಳಗೊಂಡ ಪ್ರಬಂಧವನ್ನು ಈ ಕೆಳಕಂಡ ಈ-ಮೇಲ್ ವಿಳಾಸಕ್ಕೆ ಕಳುಹಿಸತಕ್ಕದ್ದು, ಅತ್ಯಧಿಕ ಅವಶ್ಯಕತೆ ಉಳ್ಳ 15 ಅರ್ಜಿದಾರರಿಗೆ ಅನುದಾನ ನೀಡಲಾಗುವುದು.


**ಪ್ರಬಂಧದ ವಿಷಯ :** ಈ ಅನುದಾನ ನಿಮ್ಮ ಜೀವನದ ದಿಕ್ಕನ್ನು ಹೇಗೆ ಬದಲಿಸಬಲ್ಲದು ಅನ್ನುವುದರ ಬಗ್ಗೆ ಸ್ಪಷ್ಟವಾಗಿ ನಿರೂಪಿಸುವಂತಿರಬೇಕು.


ಈ-ಮೇಲ್ : Seva.nirantar@gmail.com

**ಹಾರ್ದಿಕ ಅಭಿನಂದನೆಗಳು**



ದಾವಣಗೆರೆ ಮಹಾನಗರ ಪಾಲಿಕೆ ಮಹಾಪೌರರಾಗಿ ಆಯ್ಕೆಯಾಗಿರುವ **ಶ್ರೀಮತಿ ಜಯಮ್ಮ ಪಿ.ಗೋಪಿನಾಥ್** ಅವರಿಗೂ, ತೆರಿಗೆ ಮತ್ತು ಹಣಕಾಸು ಸ್ಥಾಯಿ ಸಮಿತಿ ಅಧ್ಯಕ್ಷರಾಗಿ ಆಯ್ಕೆಯಾಗಿರುವ **ಶ್ರೀ ಸ್ವಾಗಿ ಶಾಂತಕುಮಾರ್** ಅವರಿಗೂ ಹಾರ್ದಿಕ ಅಭಿನಂದನೆಗಳು.






**ಸೈಯದ್ ಸೈಫುಲ್ಲಾ**
ಅಧ್ಯಕ್ಷರು



**ಎಸ್.ಕೆ. ಮಲ್ಲಿಕಾರ್ಜುನ**
ಕಾರ್ಯದರ್ಶಿ



**ಮಹಾಂತೇಶ್ ಒಣರೊಟ್ಟಿ**
ಖಜಾಂಚಿ



**ಎಸ್. ದಾದಾಪೀರ್**
ಉಪಾಧ್ಯಕ್ಷರು



**ಸೋಗಿ ಮುರುಗೇಶ್**
ಸಹ ಕಾರ್ಯದರ್ಶಿ

**ದಾವಣಗೆರೆ ಜಿಲ್ಲಾ ಲಾರಿ ಮಾಲೀಕರು ಮತ್ತು ಟ್ರಾನ್ಸ್‌ಪೋರ್ಟ್ ಏಜೆಂಟರ ಸಂಘ**

C/o ಕರ್ನಾಟಕ ಟ್ರಾನ್ಸ್‌ಪೋರ್ಟ್, ಆರ್.ಎಂ.ಸಿ. ಲಿಂಕ್ ರೋಡ್, ಬಿ.ಟಿ. ಲೇಔಟ್, ದಾವಣಗೆರೆ.

# ದೇವಾಲಯಗಳು ಸರ್ಕಾರದ ಮುಷ್ಠಿಯಲ್ಲಿರಬೇಕೇ?

## ಸೆಕ್ಯುಲರ್ ಸರ್ಕಾರ ಎಲ್ಲಾ ಧಾರ್ಮಿಕ ಸಂಸ್ಥೆಗಳನ್ನು ಸಮನಾಗಿ ಕಾಣಬಾರದೇಕೆ ? ಎಂದು ಹೈಕೋರ್ಟ್ ಪ್ರಶ್ನೆ

ಮಧುರೈ, ಫೆ. 25 – ಸರ್ಕಾರ ಎಲ್ಲಾ ಧಾರ್ಮಿಕ ಸಂಸ್ಥೆಗಳನ್ನು ಸಮನಾಗಿ ಏಕೆ ಕಾಣಬಾರದು? ದೇವಾಲಯಗಳು ಸರ್ಕಾರದ ಮುಷ್ಠಿಯಲ್ಲಿರಬೇಕೇ? ಎಂದು ಮದ್ರಾಸ್ ಹೈಕೋರ್ಟ್ ಪ್ರಶ್ನಿಸಿದೆ.

ತಮಿಳುನಾಡು ದೇವಾಲಯಗಳ ನಾಡು. ಇಲ್ಲಿನ ಸಂಸ್ಕೃತಿಯಲ್ಲಿ ದೇವಾಲಯಗಳು ಪ್ರಮುಖ ಪಾತ್ರ ವಹಿಸಿವೆ ಎಂದು ಹೈಕೋರ್ಟ್ ನ್ಯಾಯಮೂರ್ತಿ ಜಿ.ಆರ್. ಸ್ವಾಮಿನಾಥನ್ ನೇತೃತ್ವದ ಪೀಠ ಹೇಳಿದೆ. ಆದರೆ, ಈಗ ದೇವಾಲಯದ ಜಮೀನುಗಳನ್ನು ಖಾಸಗಿಯವರು ಕಬಳಿಸುತ್ತಿದ್ದಾರೆ. ದೇವಾಲಯದ ಮೂರ್ತಿಗಳನ್ನು ಕಳ್ಳತನ ಮಾಡಿ ವಿದೇಶಗಳಿಗೆ ಸಾಗಿಸಲಾಗುತ್ತಿದೆ. ದೇವಾಲಯದ ಸಿಬ್ಬಂದಿಗೆ ಚಿಲ್ಲರೆ ಸಂಬಳ ನೀಡಲಾಗುತ್ತಿದೆ. ಸಾವಿರಾರು ದೇವಾಲಯಗಳು ನಿರ್ಲಕ್ಷ್ಯಕ್ಕೆ ಸಿಲುಕಿವೆ. ಪೂಜೆ ಸಹ ಮಾಡುತ್ತಿಲ್ಲ. ದೇವಾಲಯಗಳ ಭವ್ಯತೆ ಮರಳಿಸಲು ಸಾಕಷ್ಟು ಕ್ರಮಗಳನ್ನು ತೆಗೆದುಕೊಳ್ಳಬೇಕಿದೆ ಎಂದು ನ್ಯಾಯಾಲಯ ಹೇಳಿದೆ.

ದೇವಾಲಯಗಳನ್ನು ಸರ್ಕಾರದ ಮುಷ್ಠಿಯಿಂದ ಮುಕ್ತಗೊಳಿಸಬೇಕು ಎಂದು ಕಾರ್ಯಕರ್ತ ರಂಗರಾಜನ್ ನರಸಿಂಹನ್ ಆನ್‌ಲೈನ್ ಮೂಲಕ ಅಭಿಯಾನ ನಡೆಸಿದ್ದರು. ರಾಜ್ಯ ಸರ್ಕಾರ ಅವರ ವಿರುದ್ಧ ದ್ವೇಷ ಹರಡಿದ ಆರೋಪದ ಮೇಲೆ ಎರಡು ಎಫ್.ಐ.ಆರ್. ದಾಖಲಿಸಿತ್ತು. ಈ ಎಫ್.ಐ.ಆರ್.ಗಳನ್ನು ಪ್ರಶ್ನಿಸಿ ನರಸಿಂಹನ್ ಹೈಕೋರ್ಟ್ ಮೊರೆ ಹೋಗಿದ್ದರು.

ಎಫ್.ಐ.ಆರ್.ಗಳನ್ನು ರದ್ದುಗೊಳಿಸಿರುವ ಹೈಕೋರ್ಟ್, ಸರ್ಕಾರ ದೇವಾಲಯಗಳನ್ನು ನಿಯಂತ್ರಿಸುತ್ತಿರುವ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದೆ.

ಸೆಕ್ಯುಲರ್ ತತ್ವ ಪಾಲಿಸುವ ಸರ್ಕಾರ ಎಲ್ಲಾ ಧಾರ್ಮಿಕ ಸಂಸ್ಥೆಗಳನ್ನು ಸಮನಾಗಿ ಕಾಣಬೇಕಲ್ಲವೇ? ಸರ್ಕಾರ ಏಕರೂಪವಾಗಿ ನಡೆದುಕೊಳ್ಳಬೇಕು ಎಂದು ಕಾರ್ಯಕರ್ತರು ಕೇಳುವುದರಲ್ಲಿ ಅರ್ಥವಿದೆಯಲ್ಲವೇ? ಎಂದು ನ್ಯಾಯಾಲಯ ಹೇಳಿದೆ.

ಅರ್ಜಿದಾರರ ವಿರುದ್ಧ ಎಫ್.ಐ.ಆರ್. ಮುಂದುವರೆಸುವುದು ಕಾನೂನು ಪ್ರಕ್ರಿಯೆಯ ದುರ್ಬಳಕೆಯಾಗುತ್ತದೆ ಎಂದಿರುವ ನ್ಯಾಯಾಲಯ, ನರಸಿಂಹನ್ ವಿರುದ್ಧದ ಎಫ್.ಐ.ಆರ್.ಗಳನ್ನು ರದ್ದುಗೊಳಿಸಿದೆ.

# ಜಿಲ್ಲೆಗೆ ಅಂಚೆ ಅಧೀಕ್ಷಕರ ವಿಭಾಗೀಯ ಕಛೇರಿ ಮಂಜೂರು



ದಾವಣಗೆರೆ, ಫೆ. 25 - ಕೇಂದ್ರ ಸರ್ಕಾರವು ಜಿಲ್ಲೆಗೆ ಪ್ರತ್ಯೇಕ ಅಂಚೆ ಅಧೀಕ್ಷಕರ ವಿಭಾಗೀಯ ಕಛೇರಿಯನ್ನು ಮಂಜೂರು ಮಾಡಿದೆ ಎಂದು ಸಂಸದ ಡಾ. ಜಿ.ಎಂ. ಸಿದ್ದೇಶ್ವರ ತಿಳಿಸಿದ್ದಾರೆ.

ಚಿತ್ರದುರ್ಗ ಜಿಲ್ಲೆಯಿಂದ ಬೇರ್ಪಟ್ಟ ನಂತರ ದಾವಣಗೆರೆ ಜಿಲ್ಲೆಗೆ ಪ್ರತ್ಯೇಕ ಅಂಚೆ ಅಧೀಕ್ಷಕರ ವಿಭಾಗೀಯ ಕಛೇರಿ ಬೇಕು ಎನ್ನುವುದು ಸಾರ್ವತ್ರಿಕ ಕೂಗಾಗಿತ್ತು, ಇದನ್ನು ಮನಗಂಡು ಪ್ರತ್ಯೇಕ ಅಂಚೆ ಕಛೇರಿಗೆ ಮನವಿ ಮಾಡಲಾಗಿತ್ತು.


ಕಳೆದ ನಾಲ್ಕೈದು ವರ್ಷಗಳಲ್ಲಿ ಸಂವಹನ ಸಚಿವಾಲಯ ಇಲಾಖೆಗೆ ಆರ್ಥಿಕ ಹೊರೆಯಾಗುವಂತಹ ಯಾವುದೇ ಹೊಸ ಕಛೇರಿಗಳನ್ನು ತೆರೆಯಲು ನಿರ್ಧಾರ ಕೈಗೊಂಡಿರಲಿಲ್ಲ. ಆದರೆ, ಜಿಲ್ಲೆಗೆ ವಿಭಾಗೀಯ ಕಛೇರಿ ಅಗತ್ಯ ಇದೆ ಎಂಬುದನ್ನು ಸಂಸದರು ಹಲವಾರು ಬಾರಿ ಸಂಸತ್ತಿನ ಶೂನ್ಯ ವೇಳೆಯಲ್ಲಿ ಮಾತನಾಡಿದ್ದರಲ್ಲದೇ ಸಚಿವರನ್ನು ಖುದ್ದು ಭೇಟಿ ಮಾಡಿ ಒತ್ತಡ ಹೇರಿದ್ದರು.

ಇದೀಗ ಸಂವಹನ ಸಚಿವಾಲಯದ ಸಚಿವ ಅಶ್ವಿನಿ ವೈಷ್ಣವ್‌ರವರ ಸೂಚನೆ ಮೇರೆಗೆ ಚಿತ್ರದುರ್ಗ ಜಿಲ್ಲೆಯಿಂದ ದಾವಣಗೆರೆ ಜಿಲ್ಲೆಯನ್ನು ಬೇರ್ಪಡಿಸಿ, ದಾವಣಗೆರೆಗೆ ಪ್ರತ್ಯೇಕ ಅಂಚೆ ಅಧೀಕ್ಷಕರ ವಿಭಾಗೀಯ ಕಛೇರಿಯನ್ನು ಹೊಸದಾಗಿ ರಚನೆ ಮಾಡಿದ್ದು, ಮಂಜೂರಾತಿ ಮಾಡಿ ಆದೇಶ ಹೊರಡಿಸಿದ್ದಾರೆ.

ಈ ಮೊದಲು ದಾವಣಗೆರೆ ಜಿಲ್ಲೆಯ ಚನ್ನಗಿರಿ ಹಾಗೂ ಹೊನ್ನಾಳಿ, ನ್ಯಾಮತಿ ತಾಲ್ಲೂಕುಗಳು ಶಿವಮೊಗ್ಗ ಅಂಚೆ ಅಧೀಕ್ಷಕರ ಕಛೇರಿ ವ್ಯಾಪ್ತಿಗೆ ಒಳಪಟ್ಟಿದ್ದವು. ಉಳಿದಂತೆ ದಾವಣಗೆರೆ, ಹರಿಹರ, ಜಗಳೂರು, ತಾಲ್ಲೂಕುಗಳು ಚಿತ್ರದುರ್ಗ ಅಂಚೆ ಅಧೀಕ್ಷಕರ ಕಛೇರಿ ವ್ಯಾಪ್ತಿಗೆ ಒಳಪಟ್ಟಿ ದ್ದವು. ಈಗ ದಾವಣಗೆರೆ ಜಿಲ್ಲೆಯ ಎಲ್ಲಾ ಆರು ತಾಲ್ಲೂಕು ಗಳನ್ನು ಒಳಗೊಂಡು ದಾವಣಗೆರೆ ಅಂಚೆ ಅಧೀಕ್ಷಕರ ಕಛೇರಿಯನ್ನು ಹೊಸದಾಗಿ ರಚನೆ ಮಾಡಲಾಗಿದೆ.

ಅಂಚೆ ಕಛೇರಿಯ ಕೆಲಸಗಳಿಗಾಗಿ ಜಿಲ್ಲೆಯ ಜನರು ಚಿತ್ರದುರ್ಗ ಹಾಗೂ ಶಿವಮೊಗ್ಗಕ್ಕೆ ಓಡಾಟ ಮಾಡುವುದು ಇನ್ನು ಮುಂದೆ ತಪ್ಪಲಿದೆ ಎಂದಿರುವ ಸಂಸದ ಸಿದ್ದೇಶ್ವರ ಅವರು, ಕೇಂದ್ರ ಸಚಿವರಾದ ಅಶ್ವಿನಿ ವೈಷ್ಣವ್‌ರವರನ್ನು ಅಭಿನಂದಿಸಿದ್ದಾರೆ.

# ಪಂಡಿತಾರಾಧ್ಯ ಶ್ರೀಗಳಿಗೆ ರಾಷ್ಟ್ರೀಯ 'ಕನ್ನಡ ಭಾರತಿ ರಂಗ ಪ್ರಶಸ್ತಿ' ಇಂದು ಪ್ರದಾನ



ಸಾಣೇಹಳ್ಳಿಯ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳವರನ್ನು ದೆಹಲಿ ಕರ್ನಾಟಕ ಸಂಘ ತನ್ನ ಈ ಬಾರಿಯ ರಾಷ್ಟ್ರೀಯ 'ಕನ್ನಡ ಭಾರತಿ ರಂಗ ಪ್ರಶಸ್ತಿ'ಗೆ ಆಯ್ಕೆ ಮಾಡಿದೆ.

ರಂಗಭೂಮಿಯಲ್ಲಿ ಮಹತ್ತರ ಸೇವೆ ಸಲ್ಲಿಸಿದವರನ್ನು ಗುರುತಿಸಿ ಪ್ರಶಸ್ತಿ ನೀಡಿ ಪುರಸ್ಕರಿಸುವ ಸಂಪ್ರದಾಯವನ್ನು ಕರ್ನಾಟಕ ಸಂಘ 2015 ರಿಂದ ನಡೆಸಿಕೊಂಡು ಬರುತ್ತಿದೆ.

ಟಿ. ಎಸ್. ನಾಗಾಭರಣ, ಶ್ರೀನಿವಾಸ ಜಿ. ಕಪ್ಪಣ್ಣ ಮತ್ತು ಹೆಚ್. ಎಸ್. ಶಿವಪ್ರಕಾಶ್ ಅವರನ್ನೊಳಗೊಂಡ ಸಮಿತಿಯು ಈ ಆಯ್ಕೆ ಮಾಡಿದೆ. ಪ್ರಶಸ್ತಿಯು 50 ಸಾವಿರ ರೂಪಾಯಿಗಳ ನಗದು, ಪ್ರಶಸ್ತಿ ಫಲಕ, ಸ್ಮರಣಿಕೆಗಳನ್ನು ಹೊಂದಿರುತ್ತದೆ. ಇಂದು ಸಂಜೆ 5 ಗಂಟೆಗೆ ದೆಹಲಿಯಲ್ಲಿ ನಡೆಯಲಿರುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು.

# ಇ-ಕಚೇರಿ ಮೂಲಕ ಕಡತ ರವಾನೆ ಕಡ್ಡಾಯ

ಬೆಂಗಳೂರು, ಫೆ. 25 - ರಾಜ್ಯ ಸರ್ಕಾರಿ ವಿಶ್ವವಿದ್ಯಾಲಯಗಳು ಮಾರ್ಚ್ 1ರಿಂದ ತಮ್ಮೆಲ್ಲಾ ಕಡತಗಳನ್ನು ಇ-ಕಚೇರಿ ಮೂಲಕವೇ ಆನ್‌ಲೈನ್‌ನಲ್ಲಿ ಕಳುಹಿಸುವುದನ್ನು ಕಡ್ಡಾಯ ಮಾಡಲಾಗಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಇಲಾಖೆಯ ಅಧಿಕಾರಿಗಳಿಗೆ ತಿಳಿಸಿದ್ದಾರೆ.

ಈ ದಿನಾಂಕದ ನಂತರ ಭೌತಿಕವಾಗಿ ಬರುವ ಎಲ್ಲ ಕಡತಗಳನ್ನು ವಾಪಸ್ ಕಳುಹಿಸುವಂತೆ ಅವರು ಸೂಚಿಸಿದ್ದಾರೆ.

ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದಿರುವ ಅವರು, 'ಇ-ಆಫೀಸ್' ತಂತ್ರಾಂಶದ ಮೂಲಕವೇ ಕಡತಗಳನ್ನು ಕಳುಹಿಸಲು ವಿ.ವಿ.ಗಳಿಗೆ ಈ ಹಿಂದೆಯೇ ಸೂಚಿಸಲಾಗಿತ್ತು. ಆದರೂ, ಕೆಲವು ವಿ.ವಿ.ಗಳಲ್ಲಿ ಕೆಲಸ ಆಗಿಲ್ಲದಿರುವುದು ತಮ್ಮ ಗಮನಕ್ಕೆ ಬಂದಿದೆ ಎಂದಿದ್ದಾರೆ.

ತಮ್ಮ ಕಚೇರಿಯು ಈಗಾಗಲೇ ಸಂಪೂರ್ಣವಾಗಿ ಇ-ಆಫೀಸ್ ತಂತ್ರಾಂಶದ ಮೇಲೆ ಕಾರ್ಯನಿರ್ವಹಿಸುತ್ತಿದೆ. ಆದರೆ, ಇಲಾಖೆಗೆ ವಿ.ವಿ.ಗಳಿಂದ ಎಲ್ಲ ಪತ್ರಗಳು, ಕಡತಗಳು ಮತ್ತು ಪ್ರಸ್ತಾವನೆಗಳು ಭೌತಿಕ ರೂಪದಲ್ಲಿ ಬರುತ್ತಿವೆ.ಇದರಿಂದ ಇ-ಆಫೀಸ್ ತಂತ್ರಾಂಶ ಅಳವಡಿಕೆಯ ಮೂಲ ಉದ್ದೇಶವೇ ವಿಫಲವಾದಂತಾಗಿದೆ ಎಂದು ಅವರು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ವಿ.ವಿ.ಗಳ ಆಡಳಿತವೂ ಸೇರಿದಂತೆ ಪ್ರತಿಯೊಂದು ಕೆಲಸವೂ ತ್ವರಿತವಾಗಿ ಮತ್ತು ಪಾರದರ್ಶಕವಾಗಿ ನಡೆಯುವಂತೆ ಮಾಡಬೇಕೆನ್ನುವುದು ಇ-ಆಫೀಸ್ ತಂತ್ರಾಂಶದ ಗುರಿಯಾಗಿದೆ. ವಿ.ವಿ.ಗಳು ಸಮಕಾಲೀನ ಕಾರ್ಯಶೈಲಿ ಅಳವಡಿಸಿಕೊಳ್ಳದಿದ್ದರೆ ಹೇಗೆ ಎಂದಿದ್ದಾರೆ.

ಜೊತೆಗೆ, ಎನ್‌ಇಪಿ ಅನುಸಾರ ವಿ.ವಿ.ಗಳಲ್ಲಿ ನಡೆಯುತ್ತಿರುವ ಡಿಜಿಟಲೀಕರಣ, ಸಮಗ್ರ ವಿಶ್ವವಿದ್ಯಾಲಯ ಮತ್ತು ಕಾಲೇಜು ನಿರ್ವಹಣಾ ವ್ಯವಸ್ಥೆ ಅಳವಡಿಕೆ, ರಾಷ್ಟ್ರೀಯ ಶೈಕ್ಷಣಿಕ ಕೋಶ (ಎನ್‌ಎಡಿ), ಇ-ಆಫೀಸ್ ಬಳಕೆಗೆ ವಿ.ವಿ.ಗಳಲ್ಲಿನ ಸಿಬ್ಬಂದಿಯನ್ನು ಸಿದ್ಧಗೊಳಿಸಿರುವ ಬಗ್ಗೆ ಪರಿಶೀಲಿಸಲು ಒಂದು ಸಮಿತಿ ರಚಿಸಿ, 15 ದಿನಗಳಲ್ಲಿ ವರದಿ ನೀಡುವಂತೆ ಅವರು ಸೂಚಿಸಿದ್ದಾರೆ.

# ಕೊರೊನಾ ನಿರ್ಬಂಧ ಸಡಿಲಿಸಲು ಸೂಚನೆ

ನವದೆಹಲಿ, ಫೆ. 25 - ಕೊರೊನಾ ಸೋಂಕು ಪ್ರಕರಣಗಳು ಕಡಿಮೆಯಾಗುತ್ತಿ ರುವ ಹಿನ್ನೆಲೆಯಲ್ಲಿ ರಾಜ್ಯಗಳು ಕೊರೊನಾ ನಿರ್ಬಂಧಗಳನ್ನು ಸಡಿಲಿಸಬೇಕು ಎಂದು ಕೇಂದ್ರ ಸರ್ಕಾರ ಸೂಚನೆ ನೀಡಿದೆ. ಮಾರ್ಚ್ ತಿಂಗಳ ಅವಧಿಗೆ ಮಾರ್ಗ ಸೂಚಿ ಬಿಡುಗಡೆ ಮಾಡಿರುವ ಕೇಂದ್ರ ಗೃಹ ಕಾರ್ಯದರ್ಶಿ ಅಜಯ್ ಭಲ್ಲ, ಸಾಮಾ ಜಿಕ, ಕ್ರೀಡೆ, ಮನರಂಜನೆ, ಶಿಕ್ಷಣ ಹಾಗೂ ಧಾರ್ಮಿಕ ಸಮಾರಂಭಗಳ ಮೇಲಿನ ನಿರ್ಬಂಧಗಳನ್ನು ತೆರವುಗೊಳಿಸಬೇಕು. ಆರ್ಥಿಕ ಚಟುವಟಿಕೆ ಗಳಿಗೆ ಚಾಲನೆ ನೀಡಬೇಕು ಎಂದು ಹೇಳಿದ್ದಾರೆ.

ಸ್ಥಳೀಯ ಪರಿಸ್ಥಿತಿಯನ್ನು ಎಚ್ಚರಿಕೆ ಯಿಂದ ಪರಿಶೀಲಿಸಿದ ನಂತರ ಚಟುವಟಿಕೆ ಗಳಿಗೆ ವಿನಾಯಿತಿ ನೀಡಬಹುದು ಎಂದು ರಾಜ್ಯಗಳಿಗೆ ತಿಳಿಸಲಾಗಿದೆ.

# ನಾಳೆಯಿಂದ ಬೆಳಗಾವಿಯಲ್ಲಿ ಭಾರತ-ಜಪಾನ್ ಸೈನಿಕರ ಕಸರತ್ತು

ನವದೆಹಲಿ, ಫೆ. 25 – ಕರ್ನಾಟಕದ ಬೆಳಗಾವಿಯಲ್ಲಿ ಫೆಬ್ರವರಿ 27ರಿಂದ ಭಾರತ ಮತ್ತು ಜಪಾನ್ ಜಂಟಿಯಾಗಿ 'ಧರ್ಮ ಗಾರ್ಡಿಯನ್ 2022' ಸೈನಿಕ ಕಸರತ್ತು ನಡೆಸಲಿವೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ.

ಹಲವಾರು ದೇಶಗಳ ಜೊತೆ ಭಾರತ ಜಂಟಿ ಸೈನಿಕ ಕಸರತ್ತು ನಡೆಸಿದೆ. ಜಪಾನ್ ಜೊತೆಗಿನ ಈ ಸೈನಿಕ ಕಸರತ್ತು ಎರಡೂ ದೇಶಗಳ ರಕ್ಷಣಾ ಸವಾಲಿಗೆ ಈಗಿನ ಜಾಗತಿಕ ಪರಿಸ್ಥಿತಿಯಲ್ಲಿ ಮಹತ್ವದ್ದಾಗಿದೆ ಎಂದು ಸಚಿವಾಲಯ ಹೇಳಿದೆ.

ಕಸರತ್ತಿನಲ್ಲಿ ಪಾಲ್ಗೊಳ್ಳಲು ಜಪಾನ್ ಪಡೆಗಳು ಶುಕ್ರವಾರದಂದು ಬೆಳಗಾವಿಗೆ ಬಂದಿಳಿದಿವೆ. ಇಂಡೋ - ಪೆಸಿಫಿಕ್ ವಲಯದ ಪ್ರಾಬಲ್ಯಕ್ಕಾಗಿ ಭಾರತ, ಜಪಾನ್, ಅಮೆರಿಕ ಹಾಗೂ ಆಸ್ಟ್ರೇಲಿಯಾಗಳು ಕ್ವಾಡ್ ಸಮೂಹ ರಚಿಸಿಕೊಂಡಿವೆ. ಕಾಡು, ಅರೆ ನಗರ ಹಾಗೂ ನಗರ ಪ್ರದೇಶಗಳಲ್ಲಿ ಜಂಟಿ ಕಸರತ್ತು ಕಾರ್ಯಾಚರಣೆ ನಡೆಸಲಾಗುವುದು.

# ನಗರದಲ್ಲಿ ವಿಮಾನ ನಿಲ್ದಾಣ, ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪಿಸಬೇಕು

**ಸರ್ಕಾರಕ್ಕೆ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ ಮನವಿ**

ದಾವಣಗೆರೆ, ಫೆ.25- ವಿಮಾನ ನಿಲ್ದಾಣ, ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪನೆ, ಐಟಿ-ಬಿಟಿ ಹಬ್ ನಿರ್ಮಾಣ, ವಾಹನಗಳ ಸುಗಮ ಸಂಚಾರಕ್ಕೆ ಅನುಕೂಲವಾಗುವಂತೆ ಟ್ರಕ್ ಟರ್ಮಿನಲ್ ನಿರ್ಮಾಣ ಸೇರಿದಂತೆ ಇತರೆ ಅಗತ್ಯ ಸೇವಾ ಸೌಲಭ್ಯಗಳನ್ನು ಮಂಜೂರು ಮಾಡಿಸುವ ನಿಟ್ಟಿನಲ್ಲಿ ಸೂಕ್ತ ಕ್ರಮ ಕೈಗೊ ಳ್ಳುವಂತೆ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಮಹಾ ಸಂಸ್ಥೆ ಅಧ್ಯಕ್ಷ ಯಜಮಾನ್ ಮೋತಿ ವೀರಣ್ಣ, ಕಾರ್ಯದರ್ಶಿ ಅಜ್ಜಂಪುರ ಶೆಟ್ರು ಶಂಭುಲಿಂಗಪ್ಪ ಅವರು ಸಿಎಂ ಬಸವರಾಜ ಬೊಮ್ಮಾಯಿ ಅವರಲ್ಲಿ ಮನವಿ ಮಾಡಿದ್ದಾರೆ.

ಸರಕು ಸಂಗ್ರಹಣೆಗಾಗಿ ಶೀತಲೀಕರಣದ ಗೋದಾಮುಗಳ ನಿರ್ಮಾಣ, ಜಿಎಸ್‌ಟಿ ಗೆ ಸಂಬಂಧಿಸಿದಂತೆ ಅವಶ್ಯ ವಸ್ತುಗಳ ಮೇಲಿನ ತೆರಿಗೆಯನ್ನು ಕಡಿಮೆ ಮಾಡುವುದು, ಅರುಣ ಚಿತ್ರಮಂದಿರದ ಹತ್ತಿರ ಪಿ.ಬಿ. ರಸ್ತೆಯ ವೃತ್ತದಿಂದ ಹೊಂಡದ ವೃತ್ತದವರೆಗೆ ಕೆಳ ಸೇತುವೆ, ರಸ್ತೆ ನಿರ್ಮಾಣ, ವಾಸೋಪಯೋಗಿ, ವಾಣಿಜ್ಯ, ಕೈಗಾರಿಕೆ ಹಾಗೂ ಖಾಲಿ ನಿವೇಶನಗಳಿಗೆ ಪ್ರತ್ಯೇಕ ತೆರಿಗೆ ದರ ಆಕರಣೆ ನಿಗದಿಪಡಿಸ ಬೇಕೆಂದು ವಿನಂತಿಸಿಕೊಂಡಿದ್ದಾರೆ. ಕೃಷಿ ಉತ್ಪನ್ನ ಮಾರುಕಟ್ಟೆ ಪ್ರಾಂಗಣದಲ್ಲಿರುವ ಕಟ್ಟಡಗಳಿಗೆ ನಗರಸಭೆ, ಪಾಲಿಕೆಯಿಂದ ಆಸ್ತಿ ತೆರಿಗೆಯನ್ನು ವಿಧಿಸುತ್ತಿದ್ದು, ಇದು ಸರಿಯಲ್ಲ, ಎಲ್ಲಾ ನಿರ್ವಹಣಾ ವ್ಯವಸ್ಥೆಯನ್ನು ಮಾರುಕಟ್ಟೆ ಸಮಿತಿ ನಿರ್ವಹಿಸುತ್ತಿದ್ದು, ಇಂತಹ ಸಮಯದಲ್ಲಿ ಯಾವುದೇ ಸೇವೆ ನೀಡದೇ ಆಸ್ತಿ ತೆರಿಗೆಯನ್ನು ವಿಧಿಸುತ್ತಿರುವುದು ಸರಿಯಲ್ಲ. ನಗರಸಭೆ, ಪಾಲಿಕೆಯಿಂದ ಆಸ್ತಿ ತೆರಿಗೆಯನ್ನು ಆಕರಿಸದಂತೆ ಆದೇಶ ನೀಡುವಂತೆ ಕೋರಿದ್ದಾರೆ.

# ಷೇರುಪೇಟೆ ಚೇತರಿಕೆ

ಟೋಕಿಯೋ, ಫೆ. 25 - ಉಕ್ರೇನ್ ಮೇಲೆ ರಷ್ಯಾ ದಾಳಿ ಆರಂಭಿಸಿದ ನಂತರ ಕುಸಿದಿದ್ದ ವಿಶ್ವದಾದ್ಯಂತದ ಷೇರು ಪೇಟೆ ಗಳು, ಶುಕ್ರವಾರ ಮತ್ತೆ ಚೇತರಿಕೆ ಕಂಡಿವೆ. ಲಂಡನ್, ಪ್ಯಾರಿಸ್, ಟೋಕಿಯೋ ಹಾಗೂ ಶಾಂಘೈ ಷೇರುಪೇಟೆಯಲ್ಲಿ ಉತ್ಸಾಹ ಕಂಡು ಬಂದಿದೆ. ರಷ್ಯಾದ ಷೇರು ಗಳ ಬೆಲೆ ಶೇ.15ರಷ್ಟು ಹೆಚ್ಚಾಗಿದೆ. ತೈಲ ಬೆಲೆ ಬ್ಯಾರಲ್‌ಗೆ 100 ಡಾಲರ್‌ಗಳ ಸಮೀಪದಲ್ಲಿದೆ. ಬಹುತೇಕ ಸರಕುಗಳ ಬೆಲೆ ಇಳಿಕೆಯಾಗಿದೆ. ಉಕ್ರೇನ್‌ನಲ್ಲಿ ಅತಂತ್ರ ಪರಿಸ್ಥಿತಿ ಇದೆ. ಆದರೂ, ರಷ್ಯಾದ ಮೇಲೆ ಈ ಹಿಂದೆ ಅಂದಾಜಿಸಿದ ಮಟ್ಟದ ದಿಗ್ಬಂಧನ ಹೇರಿಲ್ಲ. ಇದು ಹೂಡಿಕೆದಾರರಲ್ಲಿ ನಿರಾಳತೆ ತಂದಿದೆ. ಆದರೆ, ಅಮೆರಿಕದ ಷೇರು ಮಾರುಕಟ್ಟೆಗಳಲ್ಲಿ ಮಾತ್ರ ಕುಸಿತ ಕಂಡು ಬಂದಿದೆ.









JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte